[36]ದರಮಿರುಚಕೇಶಿಅಧಿಕ್ರಯದಾನಪರಿವರ್ತನಲನೆಟಿವ್ಯ
[37]ವಹಾರಚತುಷ್ಪಯುಂನುಕುಯೋಗ್ಯಮುಗಾವುಂನ್ನ ಟುಗಾ
[38]ನುನಾನಾಗೋತ್ರಪವಿತ್ರುಲೈನನಾನಾಶಾಖಾಧ್ಯಾಯುಲೈನಬಾ್ರ
[39]ಹ್ಮಲಕುರಾಜಾಧಿರಾಜವಿಷ್ಣುವರ್ಧನಗೊತ್ರಪವಿತ್ರುಲೈನರಾ
[40]ಣವೆದ್ದ ಜಗದೇವರಾಯನೆಂಗ್ಗರಿಪುತ್ರಲೈನಅಂಕುಶರಾ
[41]ಯನೆಂಗಾರಿಪುತ್ರುಲೈನಇಂಮ್ಮಡಿಅಂಕುಶರಾಯನೆಂಗಾರ್ಲು
[42]ವೆದ್ದ ಸೋಮನಪಲ್ಲಿಗ್ರಾಮಾನುಕುಪ್ರತಿನಾಮಧೇಯವೈನಅಂ
[43]ಕುಶರಾಯಪುರಮುಅನೆಅಗ್ರಹಾರಮುವಿಾರುಪುತ್ರಪೌ
[44]ತ್ರಪಾಧಂಪರ್ಯಂಗಾಅಚಂದ್ರಾರ್ಕಸ್ಥಾಇಲುಗಾಸುಖಾನುಭ
[45]ವಭವಿಂಚುಕೊನಿರಂಮ್ಮನಿವಾ್ರಇಂಚಿಇಚ್ಚಿನಭೂದಾನಧ
[46]ರ್ಮಶಾಸನಂ ॥ ಸದತ್ತಾದ್ವಿಗುಣಂಪುಂಣ್ಯಂ । ಪರದತ್ತಾನುಪಾ
[47]ಲನಂ । ಪರದತ್ತಾಪಹಾರೇಣ । ಸ್ವದತ್ತಂನಿಷ್ಫಲಂಭವೇತ್ ॥
ದಾನಪಾ
[48]ಲನಯೋರ್ಮಧ್ಯೇದಾನಾಚ್ಛ್ರೇಯೋನುಪಾಲನಂ । ದಾನಾತ್ಸ್ವ
[49]ರ್ಗಮವಾಪ್ನೋತಿ । ಪಾಲನಾದಚ್ಯುತಂಪದಂ ॥ ಯಾವದಂಗು
[50]ಲಮಾತ್ರಾಣಿಬ್ರಂಹ್ಮಕ್ಷೇ[ತ್ರ]ಹೃತಾನಿವೈ। ತಾವದ್ವರ್ಷಸಹಸ್ರಾ
[51]ಣಿಸಕುಲಂನರಕಂವ್ರಜೇತ್ ॥

NÂGAMANGALA TALUQ.

ನಾಗಮಂಗಲ ತಾಲೂಕು.

1

ನಾಗಮಂಗಲದಲ್ಲಿ ಸೌಮ್ಯಕೇಶವ ದೇವಸ್ಥಾನದ ಗರ್ಭಗುಡಿಯ ಬಳಿ ಗೋಡೆಯ ಮೇಲೆ.

[1]ಖರಸಂವತ್ಸರದಆಶಾಷಸು ೦೫ಬ್ರಿ ॥ ಸ್ವಸ್ತಿ ಸಮಸ್ತ ಭೂವನಾಸ್ರಯಂ ಶ್ರೀಪೃಥ್ವೀವಲ್ಲಭ ಮಹಾರಾಜಾ

[2]ಧಿರಾಜ ಪರಮೇಶ್ವರ ಪರಮಭಟ್ಟಾರಕ ದ್ವಾರಾವತೀಪುರವರಾಧೀಶ್ವರಯಾದವಕುಳಾಂಬರದ್ವಿಮಣಿಸರ್ವ್ವಜ್ಞ ಚೂಡಾ

[3]ಮಣಿ ಮಲೆರಾಜರಾಜವುಲೆಪೊರಳುಗಂಡಗುಡಭೀರುಂಡಕದನಪ್ರಚಂಡಏಕಾಂಗವೀರಅನಹಾಯಸೂರಸನಿವಾರಸಿದ್ಧಿ ಗಿರಿದುರ್ಗ್ಗವು

[4]ಲ್ಲಜಲದಂಕರಾಮವಯಿರೀಭಕಂಟ್ಟೀರವಶ್ರೀಮತುಪ್ರಪ್ವಚಕ್ರವರ್ತ್ತಿ ವಿಷ್ಣುವರ್ದ್ಧನಹೊಯಿಸಳಶ್ರೀವೀರಬಲ್ಲಾಳುದೇವರಸರು ರಾಜಧಾನಿದೋರಸ

[5]ಮುದ್ರದೊಳಗೆಸುಖಸಂಕತಾಲೀಲಾವಿನೋ[ದದಿಂ]ರಾಜ್ಯಂಗೆಯುತಂಶ್ರೀಮದನಾದಿ ಅಗ್ರಹಾರಶ್ರೀವೀರಬಲ್ಲಾಳುಚತುರ್ವೇದಿ ಭಟರತ್ನಕಾರವಾದ

[6]ನಾಗಮಂಗಲದಶ್ರೀಚೆಂನಕೇಸವದೇವರದೇವದಾನಹಲತ್ತಿವಿತ್ತಿಯವಳೆಯಸನಹೊಂನಗೊಂಡಸಹಳೆಯಹಿತ್ತಿಲಿಂದ

[7]ಣಬಟ್ಟ । ಅಲ್ಲಿಂತೆಂಕಲುಕನ್ನದಪಡುವಣಮೆಟ್ಟಲಿಅಲ್ಲಿಂದಪಡುಹೊಸವಳೆಆಹಳದಪಡುವನುಮುತಾಗಿಸಾಗರವಿಡಿದುಅಧಿಕ

[8]ನಕಟ್ಟದಪಡಿಅಣಕೆಭಣೆಯಕಣಿಗಿಲೆಯಕಟ್ಟೆಯಿಂಪಡುವವುತ್ತಿಯಕೆಱೆಯತೆಂಕಣಕೋಡಿಯಿಂಪಡುಸಾಗರವಾಯ್ರ್ಯಾದೆವಾವ್ವ

[9]ಲನೊಡವಿಂಪಡುವಸಾಗರವಾಯ್ರ್ಯಾದೆಕಾಣಳಿಗರಾವನತೆಂಕಣಕೋಡಿಯಿಬಯ್ರ್ಯಾಮೇಲಣನಿಱುಸಿಸುಗಲುಅಲ್ಲಿಂದಪಡುವ ಸಾಗರವಿಡಿ

[10]ದುಜೊಕಚಾಯ್ರ್ಯಾಕಟೆಯಮೇಲಣನಟ್ಟಕಲುಅಲ್ಲಿಂಪಡುವಸಾಗರವಿಭಾಗವಾಗಿಚೆಳೆಯಕಟೆಯಮೇಲಣನಟ್ಟಕಲುಅಲ್ಲಿಂಪಡುವನೇ

[11]ಣಿಯಕಟೆಅಲ್ಲಿಂಪಡುವವೊದಲಿಹಳ್ಳಿಯಕೆಱೆಯಏರಿಯಮೇಲಣಕಲುಅಲ್ಲಿಂಪಡುವನಿಡುಮಡುಆಪಡುವಸಾಗರಅ

[12]ರಸೆಟ್ಟಿಯಹಳೆಯವೊದಲಿಹಳ್ಳಿಯಕಾಡಿಹಳದಿಂಸಾಗರಮುಯ್ರ್ಯಾದೆತುಪ್ಪದವಾಡುವಿನಆರಸೆಟ್ಟಿಯಹಳ್ಳಿಯಎಡೆಹಳದಿಂ

[13]ಸಾಗರವಿಡಿದುಪಡುವಆರಸೆಟ್ಟಿಯಹಳ್ಳಿಯಹೂವಿನಹಳ್ಳಿಯಎಡೆಯಣಕಗ್ಗಲವೊರಡಿಯಿಂಬಡಗತಡಿಕಿನಹಣೆಯಪಡುವಣಹಳ

[14]ದಿಂಬಡಗಅಜ್ಜೆಯಾನಹಳ್ಳಿಯಆರಸೆಟ್ಟಿಯಹಳ್ಳಿಯಪಡುವಣತಡಿನಹಣೆಯಿಂ ಬಡಗಕೆಂತಟ್ಟಿಯಹಳದಿಂವೂಡಸಾಗರವಾಯ್ರ್ಯಾದೆಯಿಂ

[15]ಣವಿಹಳ್ಳಿಆರಸೆಟ್ಟಿಯಹಳ್ಳಿಯಎಡೆನೊಱುಕಿಲಹಳದಿಂವೂಡಸಾಗರವಾಯ್ರ್ಯಾದೆಕುಂಬ್ಳಿಹರಳಹಳದಿಂವೂಡಬಡಗಣಆರಾಜನ ಹಳದಿಂ

[16]ವೂಡವಂದರಿಗೆಯಹಳದಿಂವೂಡಲೋಡಿವಮಹದೇವರದೇವಾಲ್ಯದಿಂವೂಡಬೆತಲೆಬೀರಕನ್ನ ವೂಡತಂಗೇಳುಬಿಸವೂಡ ಇಸನ್ಯೆದವೂಲೆನೇ

[17]ಱಿಯಕಲುಅಲ್ಲಿಂತೆಂಕಚಂಚರಿವಳದನೀಱುಸುಗಲಗುಡಿಯತೆಂಕ . . ವರಿಸಿಬೆಲದಿಕಡೆಗಲಿಂವೂಡಆನೆಗಲಬಡಗಣಗಿಡಿಗ ನಾಲವೈವು

[18]ತೆವರಿಸಿಸುಸುಗಲಗುಡಿಯವೂಡಬಿಳಿಯಗುಂಡುಗಲಗುಡಿಇಂ ವೂಡಗೊವವರಗುಡಿವೂಡನೊರೆಗಲವೊರಡಿಯತೆಂಕಣವೊ ನೆಯಿಂವೂಡ

[19]ಕುಂಟೂಲದಿಂವೂಡಪ್ರಮನಕಣಿವೆಯಗುಡಿಯಿಂಕಾಲುವೆಟ್ಟವಿಡಿದುಹೊಂನಗೊಂಡನಹಳೆಯಹಿಂದಣಬೆಟ್ಟಯಿಪಯ್ರ್ಯಾ ಚತ್ತುಸ್ಸೀಮೆ ॥ ಶ್ರೀ

[20]ಶ್ರೀ ಶ್ರೀ

2

ಅದೇ ದೇವಸ್ಥಾನದ ಮಹಾದ್ವಾರದ ಬಳಿ ನಟ್ಟ ಕಲ್ಲು.

ಪ್ರಮಾಣ 6′ × 3′ 6′.

[1]ಶ್ರೀಶುಭಮಸ್ತು ಸ್ವಸ್ತಿ ಶ್ರೀಜಯಾಭ್ಯುದಯಶಾಲಿವಾಹನಶಕವರುಷ ೧೪೬೬ಸಂದವ
[2]ರ್ತ್ತಮಾನವಾದಶೋಭಕ್ರುತುಸಂವತ್ಸರದಮಾಘಶು ೫ ಲುಶ್ರೀಮನ್ಮಹಾರಾ
[3]ಜಾಧಿರಾಜರಾಜಪರಮೇಶ್ವರಶ್ರೀವೀರಪ್ರತಾಪಸದಾಶಿವಮಹಾರಾಯರುಪ್ರಿಥ್ವೀರಾಜ್ಯಂಗೆ
[4]ಯುತಿರಲು । . . ಮಂತಚಂನರಾಜತಿಂಮಪನಾಯಕರುಕದಪನಾಯಕರುತಿರುಣನಾ
[5]ಯಕರುನಮಗೆತಂಮಸ್ವಾಮಿಯನಿರುಪದಲಿ . . . . ಅಗ್ರಹಾರದೇವದೇವಸ್ಥಾ
[6]ನಪುರವರ್ಗದಾನ . . . . . .
[7]ದುಹೇಳಿ . . . . . .
[8]ಪರಿಪಾಳಿಸು . . ಯಿಷ್ಟನೂಆತನಿಗೆ . . . . . !
[9]ಅನಂತಅಯಿಶ್ವರಿಯವಹುದುಯಿ . . . . . ಲನಾಡ
[10]ವರುಗಳ . . . . ತಂಮ . . . . . ನೈದುವಂ
[11]ಗಮಸ . . . . . ಬಾಗೂರಲಿ . . . . . ಮ
[12] . . . . ಯನುಹೆಱಳಿಗೆ . . . . . ಎಂದುಮಾಡದೆ . . . . . ಶಾಸನ ॥ ದಾನಪಾಲನಯೋ
[13]ರ್ಮಧ್ಯೇದಾನಾಛ್ರೇಯೋನುಪಾಲನಂದಾನಾತ್ಸ್ವರ್ಗಮವಾಪ್ನೋತಿಪಾಲನಾದಚ್ಯುತಂಪದಂ ॥ ಸ್ವದತ್ತಾ
[14]ದ್ವಿಗುಣಂಪುಣ್ಯಂಪರದತ್ತಾನುಪಾಲನಂಪರದತ್ತಾಪಹಾರೇಣಸ್ವದತ್ತಂನಿಷ್ಫಲಂ
[15]ಭವೇತ್ ॥ ಸ್ವದತ್ತಾಂಪರದತ್ತಾಂವಾಯೋಹರೇತುವಸುಂಧರಾಷಷ್ಟಿವರ್ಷಸಹಸ್ರಾ
[16]ಣಿವಿಷ್ಟಾಯಾಂಜಾಯತೇಕ್ರಿಮಿ ॥

3

ನಾಗಮಂಗಲದಲ್ಲಿ ಭುವನೇಶ್ವರೀ ದೇವಸ್ಥಾನದ ಪ್ರಾಕಾರದಲ್ಲಿರುವ ಕಲ್ಲಿನಲ್ಲಿ.

ಪ್ರಮಾಣ 5′ × 2′ 9″.

[1] . . . . . .
[2] . . . . . ಕೇಶವಾಯಶಿವಾಯಚ ॥ ಶ್ರೀಮ . . . . . .
[3] . . . . . ಱೆ . . . . . ಶ್ರೀಮ
. . . . . .
[7] . . . . . ದಿಶಾಚಕ್ರಮನೊತ್ತಿಕೊಂಡುತಳ
[8] . . . . . ಯದುವಂಶವರ್ದ್ಧನಕರಂಶ್ರೀವಿಷ್ಣುಭೂಪಾಳ . .
[9]ಬರ . . . . . ಮಲಂಗಿಜಯಲಕ್ಷ್ಮಿ . . . . ಕೊ . . . . . .
[10] . . . . . ॥ ಸ್ವಸ್ತಿಸಮಧಿಗತಪಂಚಮಹಾಶಬ್ದಮ
[11]ಹಾಮಣ್ಡಳೇಶ್ವರನುಂದ್ವಾರಾವತೀಪುರವರೇಶ್ವರನುಂಯದುಕುಳಕಳಶನೃಪಧರ್ಮ್ಮಹರ್ಮ್ಯ . .
[12] . . . . . ನಂಅಪ್ರತಿಹತಪ್ರತಾಪವಿದಿತವಿಜಯಾರಂಭನುಂವಾಸಂತಿಕಾದೇವೀಲಬ್ಧವರಪ್ರ
[13] . . . . ಶ್ರೀಮನ್ಮುಕುಂದಪಾದಾರವಿಂದವಂದನವಿನೋದನುಂಅಕ್ಷುಣ್ಣಲಕ್ಷ್ಮೀಲಕ್ಷಿತವಕ್ಷಪ್ರದೇಶನುಂ
[14]ಪ್ರತಿದಿನೋಪಚೀಯಮಾನಪುಣ್ಯಪ್ರವೇಶನುಂ । ವಿನಮದಹಿತಭಯಚಕಿತಮುಖಬಿಂ
[15]ಬಸ್ಫಟಿಕಪಾದಪೀಠವಿನ್ಯಸ್ತ . . . . . ಆಳಿಂಮುನ್ನಿಱಿವನುಂಶೌರ್ಯ್ಯಮಂಮೆಱೆವನೆನಿಸಿದಶ್ರೀ

16ಮದ್ವಿಷ್ಣುವರ್ದ್ಧನದೇವರಪಾದಾರಾಧನೆಯಿಂದಗಣ್ಯಕಾರುಣ್ಯಭೂಮಿಯೆನಿಸಿ ॥ ಪಲ್ಲವಕುಲ . . . ಪಾ
17 . . ಲಲ್ಲಿಯಸಿರಿಯಾದಳೊಪ್ಪೆವಿಷ್ಣುಗೆತಾಂಸದ್ವಲ್ಲಭೆಬಮ್ಮಲದೇವಿಯೆಪಲ್ಲವಿಸಲುರಾಜ್ಯವಲ್ಲಿವಿಶ್ವಂ . . .
18ಯೊಳು ॥ ಕುಂದದೆಸಿರಿಯೆಂದುಂತನ್ನಂಗಮನೀಕ್ಷಿಸುವರತ್ನದರ್ಪ್ಪಣಮೆನೆಚೆಲ್ವೊಂದಿದಬಮ್ಮಲದೇವಿಯೊಳೆ
19 . . ಂಶ್ರೀರೂಪಮೆಸೆವುದೊಂದಚ್ಚರಿಯೇ ॥ ಚಾವುಣ್ಡಬ್ಬರಸಿಗಮುರ್ವ್ವೀಧರಗೋವಿಂದರ . . ಮು . . . .
20 . . ಸಕಳೋರ್ವ್ವೀ . . . . . ವಿಷ್ಣುಗಂಬಮ್ಮಲದೇವಿಯೆತಾಂಪಟ್ಟದರಸಿಯೆನೆನೆಗಳ್ದಿರ್ದ್ದಳು ॥ ಸ್ವಸ್ತಿಸಮಸ್ತಮಂಡಳೇ . .
21 . ದಾಯಕರಚಂದ್ರಲಕ್ಷಣಾಭಿರಾಮೆಯಂ ॥ ವೀರವಿತರಣವಿಳಾಸಾವಾಸವಿಷ್ಣು . . . ನ . . . . . .
22ಮುಂ ॥ ಪಾರ್ವ್ವತೀಚರಣನಖಕಿರಣಚಂದನಚರ್ವ್ವಿತಲಲಾಟ . . . . ಶೋ . . . . . ಯಪಲ
23ವಿದಿತಸಾಭಾಗ್ಯವಲ್ಲರೀಪಲ್ಲ . . . . . ಮಾನರಾಜ್ಯಪಟ್ಟಲಕ್ಷಿತಲ . . . . . ಸ . . ತುಕ
24 . . ಕಳಾಪಮಶೃಣವ . . . . . ಯುಂಜಗದ್ವಿಜಯಮ . . . . . ಗ್ರಮಹಿಷೀವಿ
25ನೋದವರಶಂಖೋದ್ಪಣ್ಡ . . . . . ಮರಸ್ತೋಮ . . . . . ಲಾವಣ್ಯಸಾಭಾಗ್ಯ
26ಸಂಪೂಜಿತೆಯು . . . . . ದಹಿತಮಹಿ . . . . . ಂಚಿತಪದಾಂಬುಜಾತೆಯುಂ ॥
27ಅತಿವಿಮಳಕು . . . . . ದ್ಯೋಪಾರಿಜಾತ . . . . . ಮಯಾಂಚಿತಸದರ್ತ್ಥವಚನಚಾ
28ತುರ್ಯ್ಯಹೃತಭುಜಬಳವೀರಗಂಗವಿಷ್ಣುವರ್ದ್ಧನ . . . . . ತ್ರಕೀರ್ತ್ತಿಸಂಪತ್ತಿಸಂಪಾದಿತಗಂಗಾತರಂಗೆ
29 . . ಂ ॥ ಯದುರಾಜರಾಜಹಂಸಾನನ್ದಕರಲಾವಣ್ಯಸಿಂಧುವುಂಸಕಳಸಮಯಬಂಧುವುಮೆನಿಸಿದಶ್ರೀ
30ಮತ್ಪಿರಿಯರಸಿಪಟ್ಟಮಹಾದೇ . . . ವಿಷ್ಣುವರ್ದ್ಧನದೇವರಕಾರುಣ್ಯದಿಂಕಲ್ಕಣಿನಾಡೊಳಗಣನಾಗಮಂ
31ಗಲದಲುಶಂಕರನಾರಾಯಣದೇವರದೇಗುಲಮಂಬಮ್ಮಲದೇವಿಯರುಜೀರ್ಣ್ಣೋದ್ಧಾರಂಮಾಡಿಸಿಸಕವರ್ಷಸಾ
32ಸಿರದಅಯ್ವತ್ತೇಳನೆಯಆನನ್ದಸಂವತ್ಸರದುತ್ತರಾಯಣಸಂಕ್ರಮಣದಂದುಅರಿಕನಕಟ್ಟಮಂದೇವರಸ್ನಾನನಿವೇ
33ದ್ಯಂಮೊದಲಾದಭೋಗಕ್ಕೆತಕ್ಕನ್ತಾಗಿಆಚಂದ್ರಾರ್ಕ್ಕತಾರಂಬರಂಸಲ್ವಂತಾಗಿಶ್ರೀಮತಾಸಮಸ್ತಗುಣಸಂಪನ್ನರ
34ಪ್ಪಶೂರ್ಯ್ಯಾಭರಣಪಂಡಿತರ್ಗ್ಗೆಸರ್ವ್ವನಮಸ್ಯಮಾಗಿಧಾರಾಪೂರ್ವ್ವಕಂಮಾಡಿಕೊಟ್ಟರುಸೀಮಾನ್ತ
35ರಮೂಡಲುಹೊಸವಳ್ಳಿಯಕೆಱೆನೀರುಯೇತಗದ್ದೆಗೆಸಲ್ಗುತೆಂಕಲುಹೂಲಿಗುಂಡಿಯೊಳಗಾಗಿಕೊ .
36ಮಾಣಿಕದಬಡಗಣಕೋಡಿಯಬೆದ್ದಲೆಅರಿಕನಕಟ್ಟಕ್ಕೆಯೆಮ್ಮೆಗೆಱೆಯಬಡಗಣಕೋಡಿಹಡುವಲ
37ಕಗ್ಗಲ್ಲಸರಡುಬಡಗಲುಮತ್ತಿಯಕೆಱೆಯೊಳಗಾಗಿಅಲ್ಲಿಯಸೀಮಾನ್ತರ ॥ ಅಲ್ಲಿಯಮೂವರ
38ಬಾಚಿಗಾವುಣ್ಡಂಗೆಕೊಡಂಗೆಗದ್ದೆಸಲಗೆಯೆರಡುಬೆದ್ದಲೆನೂಱಕಮ್ಮ ॥ ನಾಗಮಂಗಲದಹಿರಿಯಕೆಱೆ
39ಯಲುದೇವರಿಗೆಗದ್ದೆಸಲಗೆಮೂಱು ॥ ಸ್ವದತ್ತಂಪರದತ್ತಂವಾಯೋಹರೇತ್ಸವಸುಂಧರಾಷಷ್ಠಿರ್ವ್ವರ್ಷಸಹಸ್ರಾ
40ಣಿವಿಷ್ಠಾಯಾಂಜಾಯತೇಕೃಮಿಃಈಧರ್ಮ್ಮವನಾರಾನುವಳಿದರಪ್ಪಡೆಗಂಗಾತೀರದಲನನ್ತ
41ಕವಿಲೆಯಂತಪೋದನರವೇದಾಡ್ಯರನಳಿದಫಳಮನೆಯ್ದುವರು ॥ ಆಬಾಚಿಗಟ್ಟಮಂಕೊಡಂಗೆ ॥

ಹಿಂಭಾಗ.

(ಸುಮಾರು 6 ಪಚ್ತಿಗಳು ಕಾಣುವದಿಲ್ಲ)

48ಹರ್ಷಪುಳಕಸನ್ತಾನನುಂರಿಪುವಿಜಯವಿದಿತವಿವಿಧರತ್ನ
49ಖಚಿತಕರ್ಣ್ಣಕುಂಡಲಪ್ರಭಾಮಂಡಳಸ್ಥಗಿತಗಣ್ಡಮಂಡಳನುಂಅ
50ನೂನವಿಭವಾಲೋಕನಾಗಮನೋತ್ಕಂಠಿತಾಖಂಡಳನುಂವಿಕಟ
51ವಕ್ಷಸ್ಥಳವಿರಾಜಮಾನವಿಪುಳವಿಮಳಮುಕ್ತಾಫಳವಿಕೀರ್ಣ್ಣ
52ಕಾನ್ತಿದನ್ತುರಿತಕೇಯೂರಕೀರ್ತ್ತಿಮುಖನುಂಮೃದುಮಧುರ . .
53ನಮಿಳಿತಮಂದಸ್ಮಿತಸುಧಾರಸಸ್ಯಂದಿವದನವಿಧುಬಿಂಬ
54ಪ್ರಸಾದಸಖನುಂ . . . . . ವಿಜಯಾರೂಢವಿಕ್ರಮೂ
55ತಿಕರ್ಕ್ಕಶಭುಜಯುಗ . . . . . ಭುಜಾಟನೋತ್ಕಂಠವಿಜ

[56]ಯಲಕ್ಷ್ಮೀದೃಢೀಕರಣನಿಹಿತಖಡ್ಗನಿಗಳನುಂ । ಸೇವಾಗಮನಸಮಯ
[57]ಸಮದಕಾಮಿನೀಕದಂಬಚಳನಚಳಸಿಂಜಿನೀಸಂಜಾತಮಂಜುನಾ
[58]ದೋದ್ಬುದ್ಧಕುಸುಮಬಳಿಶಬಳಮಧುಕರನಿಕರಝಂಕಾರಮುಖ
[59]ರಿತಾಸ್ಥಾನರಂಗನುಂ.....ವಿಹಾರಸಫಳಶಸ್ತ್ರನಂದನಾಭಿ
[60]ರಾಮನುಂ...ಶರಣಾಗತಕುಭೃತ್ಕುಳನಿಯುಕ್ತಕ್ಷೇಮನುಂಸಂ
[61]ಗೀತಪ್ರಸಂಗಭಂಗೀಸಂಗತಚತುರಭರತನುಂ । ತರ್ಕ್ಕವಿದ್ಯಾವಿಶಾ
[62]ರದವಿಚಾರನಿರತನುಂಶಬ್ದವಿದ್ಯಾಸಮಗ್ರಲಕ್ಷಣಸುಶಿಕ್ಷನುಂ
[63]ವಿವಿಧವಿದ್ಯಾಪರೀಕ್ಷಾದಕ್ಷನುಂಸಕಳಪುರಾಣಪುಂಜೆತಾರ್ತ್ಥ
[64]ರತ್ನಕೋಶನುಂ । ಪುರುಷಾರ್ತ್ಥಸಾರ್ತ್ಥಮೂಳಸತ್ಯಮಣಿಭೂ
[65]ಷಣನುಂ । ಕವಿತ್ವತತ್ವನಿಶಿತಬುದ್ಧಿಯುಂ । ಅವಂಧ್ಯಮಂತ್ರಸಿದ್ಧಿ
[66]ಯುಂ । ಲೋಕಾಲೋಕನಶ್ರೀಕರಾಕಾರನುಂ । ಕಾಂಭೋಜವಾಜಿರಾಜಿ
[67]ಸಂಚರಣತರಳಧರಣಿವಳಯನೆನಿಸಿದಶ್ರೀಮದ್ವಿಷ್ಣುವ
[68]ರ್ದ್ಧನದೇವರುಸುಖಸಂಕಥಾವಿನೋದದಿಂರಾಜ್ಯಂಗೆಯ್ಯುತ್ತ
[69]ವಿರ್ದ್ದರುಮಂಙ್ಗಳಮಹಾ ಶ್ರೀ ಶ್ರೀ

4

ನಾಗಮಂಗಲದಲ್ಲಿ ವೀರಭದ್ರದೇವಸ್ಥಾನದೊಳಗೆ ನವರಂಗಮಂಟಪದ ಬಾಗಲಿನ ಬಲಭಾಗದಲ್ಲಿ.

ಪ್ರಮಾಣ 2′ 3″ × 1′ 3″.

[1]ಶ್ರೀ । ನಮಸ್ತುಂಗಶಿರಶ್ಚುಂಬಿಚಂದ್ರಚಾ
[2]ಮರಚಾರವೇತ್ರೈಲೋಕ್ಯನಗರಾರಂಭಮೂ
[3]ಲಸ್ತಂಭಾಯಶಂಭವೇ ॥ ಸ್ವಸ್ತಿಶ್ರೀಜಯಾ
[4]ಭ್ಯುದಯಶಾಲಿವಾಹನಸಕವರುಷ ೧೫೩೩ನೆಯ
[5]ಪ್ರಜೋಪತಿಸಂವತ್ಸರದಜೇಷ್ಟಶು ೧ ಲುಶ್ರೀಮನ್ಮ
[6]ಹಾರಾಜಾಧಿರಾಜರಾಜಪರಮೇಶ್ವರಶ್ರೀವೀರಪ್ರತಾಪ
[7]ಕ್ರುಷ್ಣದೇವಮಹಾರಾಯರೂಪ್ರುಥ್ವೀರಾಜ್ಯಂಗೆಯಿಪುತಿ
[8]ರಲುಅವರಅರಮನೆಯಬೇಹಾರಿಗಳುಗುಂಮ
[9]ಳಾಪುರದಅಕ್ಕನಚೆಂನಿಸೆಟ್ಟಿಯರಮಕ್ಕಳುಹೊಂನಿ
[10]ಸೆಟ್ಟಿಯರೂಶ್ರೀಮದನಾದಿಅಗ್ರಹಾರಶ್ರೀವೀರ
[11]ಬಲಾಳಚತುರ್ವೇದಭಟ್ಟರತ್ನಾಕರವಾದನಾಗ
[12]ಮಂ[ಗ]ಲದಶ್ರೀವೀರಭದ್ರದೇವರರಂಗಮಂಟಪಮುಂ
[13]ದಣಗಂಧಗೋಡಿಮಂಟಪದಸೇವೆಯನೂಮಾಡಿ
[14]ವೀರಭದ್ರದೇವರಶ್ರೀಪಾದಕ್ಕೆಸಮರ್ಪ್ಪಿಸ್ತರು
[15]ಬರದಾತವೀರಾಚಾರಿಶ್ರೀ

5

ಅದೇ ಬಾಗಲಿನ ಎಡಭಾಗದಲ್ಲಿ.

ಪ್ರಮಾಣ 2′ 6″ × 1′ 6″.

[1]ಶ್ರೀಶೌಪುಮ್ಯಸಂವತ್ಸರದಅಶ್ವ್ಯೀ
[2]ಜಸು ೧೨ ಬು ಭಟ್ಟ
[3]ರತ್ನಾಕರವಾದನಾಗಮಂಗಲ
[4]ದಶ್ರೀಮದಅಸೇಷಮಹಾಜನಂಗ
[5]ಳುಯೀವುರವೀರಭದ್ರದೇವರಿಗೆಕೊ
[6]ಟ್ಟಶಾಸನದಕ್ರಮಮೆಂತೆಂದಡೆಆವೀರ
[7]ಭದ್ರದೇವರಸ್ಥಾನಕೆವರುಷಂಪ್ರತಿ
[8]ತೆಱುತಬಹವೊದಲಪ ೫ ನು
[9]ಂತೆಱುವನುವುಳಿದಅಳಿಬಳಿಯಲ್ಲ
[10]ವೀರಭದ್ರದೇವರಿಗೆಸೆಲವಾಗಿ
[11]ಧಾರಾಪೂರ್ವ್ವಕಂಮಾಡಿಬಿಟ್ಟ
[12]ಶಾಶನಯಿಂತಪ್ಪುದಕೆಆಮಹಾ
[13]ಜನಂಗಳವೊಪ್ಪಶಂಖಚಕ್ರಯೀ
[14]ಮಹಾಜನಂಗಳನಿಯೋಗದಿಂಬ
[15]ರದಸೇನಬೋವಶ್ರೀರಂಗದೇವನಮ
[16]ಗಕಾವಂಣ್ಣನು ॥ ಬಾಲ್ದಳಿಸೆಟ್ಟಿಯಮ
[17]ಗಬೋಕಿಸೆಟ್ಟಿಯದಾರ್ಮ್ಮ

6

ಅದೇ ದೇವಸ್ಥಾನದ ಮುಂದೆ ಉಯ್ಯಾಲೆಯ ಉತ್ತರದಿಕ್ಕಿನ ಕಂಭದಲ್ಲಿ.

[1]ಸ್ವಸ್ತಿ ಶ್ರೀಶಕವರುಷಸಾ
[2]. ರದಮುನೂಱನ
[3]. . . . . ಸಂವತ್ಸರ
[4]. . . . . ಂಗು ಶ್ರೀ

(ಮುಂದೆ 4 ಪಙ್ತಿಗಳು ಕಾಣುವದಿಲ್ಲ)

* 7

ಹುಲ್ಲೆಕೆರೆ ನರಸಿಂಹಯ್ಯನಲ್ಲಿದ್ದ ತಾಮ್ರಶಾಸನದ ಪ್ರತಿ.

[1]ಕುಭವಮಸ್ತು । ಹರೇರ್ಲೀಲಾವರಾಹಸ್ಯದಂಷ್ಟ್ರಾದಂಡಸ್ಯ
[2]ಪಾತುವಃ । ಹೇಮಾದ್ರಿಕಲಶಾಯತ್ಪಧಾತ್ರೀಕೃತತ್ರಿಯ
[3]ಂದಧೌ । ನವಮಸ್ತುಂಗಶಿರಕ್ಚುಂಬಿಚಂದ್ರಚಾಮರಚಾ
[4]ರವೇ । ತ್ರೈಲೋಕ್ಯನಗರಾರಂಭಮೂಲಸ್ತಂಭಾಯಶಂ
[5]ಭವೇ । ಸ್ವಸ್ತಿ ಶ್ರೀವಿಜಯಾಭ್ಯುದಯಶಾಲಿವಾಹನಶಖ
[6]ವರ್ಷಂಗಳು ೧೬೪೪ ಸಂದವರ್ತಮಾನವಾದಚಿತ್ರಭಾ
[7]ನುನಾಮಸಂವತ್ಸರದಆಷಾಢಬ ೭ ಲ್ಲು ಶ್ರೀಮದ್ರಾಜಾಧಿರಾಜ
[8]ರಾಜಪರಮೇಶ್ವರಪೌಢಪ್ರತಾಪಾಪ್ರತಿಮವೀರನರಪತಿಮಹೀ
[9]ಕೂರಕ್ಕಿಕೃಷ್ಣರಾಜವಡೆಯರಯ್ಯನವರು । ವೆಂಕಟಭಟ್ಟು
[10]ಕೃಷ್ಣಭಟ್ಟರಾಮಾಭಟ್ಟವೆಂಕಟರಮಣಭಟ್ಟನಿಗೆಸಹಾಬರು
[11]ಕೊಟ್ಟಕ್ರಯಭೂದಾನತಾಂಬ್ರಶಾಸನದಕ್ರಮವೆಂತೆಂದರೆಪಟ್ಟಣ
[12]ದಹೋಬಳಿನೀಮಿವಿಚಾರದಚಾವಡಿವಳಿತದಪಳ್ಳೂರುಸ್ಥಳದ
[13]ಜಟ್ಟೀನಹಳ್ಳಿಗ್ರಾಮ ೧ ಕಟ್ಟಿ ೧ ಸಹಾವಿಚಾರದಚಾವಡಿಶಾ
ನಭೋಗ
[14]ವೆಂಕಟರಮಣಯ್ಯನಲೆಕ್ಕಿಪ್ರಕಾರಾಪ್ರಮಾಣಿಸಂವತ್ಸರಕ್ಕೆಹು
ಟ್ಟುವ
[15]ಳಿನಕಲಸುವರ್ನಾದಾಯದವಸಾದಾಯಸಹಕಂಗು ೫೦।
[16]ವಿಂಗಡಮಾಣಿಕ್ಯಸುಂಕಗು ೬೮॥ ಪಂಮುಗು ೫೦॥ ಅಂತ್ತು
[17]ಹುಟ್ಟುವಳಿಕಂಗು ೬೦೦ ಅರುವತ್ತು ಯರಡುವರಹಾವುಯ
[18]ರಡುಹಣದಹುಟ್ಟುವಳಿಗ್ರಾಮವನ್ನುಕ್ರಯಭೂದಾನವಾಗಿ
[19]ಅಸ್ಪಹೆಕೊಡಿಸಬೇಕೆಂದುನೀವುಹೇಳಿಕೊಂಡುಯಿದಕ್ಕೆ ಸಲ್ಲೂ
[20]ಕ್ರಯಕಂಠಿಗು ೬೦೦ ಆರನೂರಇಪ್ಪತ್ತು ಯರಡುವರ
[21]ಹವನ್ನುವರ್ತಕನರಸುಂಪ್ಪದಾಸೂಮುಖಾಂತ್ರಜೊ
[22]ಕ್ಕಸಕ್ಕೆ ಸಾಕಲ್ಯವಾಗಿವಪ್ಪಿಸಿದ್ದರಿಂದಯಿಗ್ರಾಮವನ್ನು
[23]ನಿಮಗೆಕ್ರಯಭೂದಾನವಾಗಿಕೊಡಿಸಿಯಿದೇನೆಯಾದಕಾ
[24]ರಣಯಿಗ್ರಾಮದಯಲ್ಲೆ ಚತುಸ್ಸೀಮೆಯೊಳಗುಳ
[25]ನಿಧ್ಯಾದ್ಯಷ್ಟಭೋಗತೇಜಸ್ವಾಮ್ಯಂಗಳುನಿಮಿಗೆಸಲ್ಲುವದು
[26]ಯಿಲ್ಲಿಂದಂಮುಂದೆನೀವುಮಾಡುವಅಧಿಕ್ರಯದಾನಪರಿ
[27]ವರ್ತನೆಗಳಿಂಬವ್ಯವಹಾರಚತುಷ್ಟಯಂಗಳಿಗುಯೋಗ್ಯ
[28]ವಾಗಿನಿಮಗೆಸಲ್ಲುಸದಾದಕಾರಣಪುತ್ರಪೌತ್ರಪಾರಂಪರ್ಯ
[29]ವಾಗಿನಿರುಪಾಧಿಕಸರ್ವಮಾನ್ಯವಾಗಿಶಾಶ್ವತವಾಗಿಅನುಭ
[30]ವಿಸಿಕೊಂಡುಬರುವದು।ಯೀಕೈವಭಗಿನೀಲೋಕೇಸರ್ವೇಷಾಮೇ
[31]ವಭೂಭುಜಾಂಭೋಜ್ಯಾನಕರಗ್ರಾಹ್ಯವಿಪ್ರದತ್ತಾ
[32]ವಸುಂಧರಾ । ಸ್ವದತ್ತಾಂಪರದತ್ತಾಂವಾಯೋಹರೇತ
[33]ವಸುಂಧರಾಂ । ಷಷ್ಟಿರ್ವರ್ಷಸಹಸ್ರಾಣಿವಿಷ್ಠಾಯಾ
[34]ಂಜಾಯತೇಕೃಮಿಃ ॥ ಶ್ರೀಕೃಷ್ಣರಾಜ ॥

8

ನಾಗಮಂಗಲ ಹೋಬಳಿ ಹಾಲ್ತಿ ಗ್ರಾಮಕ್ಕೆ ಪಶ್ಚಿಮ ಬೆಟ್ಟದಮೇಲೆ ಮಲ್ಲೀಶ್ವರದೇವಸ್ಥಾನದ ಒಳಗುಂಡಿನ ಮೇಲೆ.

[1]ವಿಸ್ವವಸುಸಂವತ್ಸ
[2]ರದಪುಷ್ಯಸು
[3]ದ್ಧ ೧೫ ಸೋ ಸಿ೨
[4]ಗಳದೇವಬಹೆ
[5]ಯರುತಬಖಿವಾಜುವ
[6]ಲ್ಲಿತಂವುಸಿಸ್ಯೆಚಿಕ್ಕಿಯರ
[7]ಮಗವುದ್ದಣನುದೇ
[8]ವರಕಟ್ಟಿಗುಮಂಣ
[9]ಹಕುವದಕೆಕೊಡ
[10]ದುಗುಳಿಗಿ ೧೫ ದೇ
[11]ವರಿಗಲಮ್ಮಿತಪಡಿನಿತ್ಯ
[12]ಸಲುಹುದು ॥
[13]ಮತಂಸಿಂಗಳದೇವಬ
[14]ಡೆಯರುತಂವುಸಿಸ್ಯೆ
[15]ಮುದ್ದಂಣನಕಯ್ಯಕೆಜಿಬೆಗೆ
[16]ಕೆಕೊಂಡದುಗುಗಂ ೧ ಬಡ್ಡಿ
[17]ವರುಸ ೧ಕ್ಕೆ ಮುಬುಹಣ
[18]ವದೇವರಿಗೆದೀಪಕೆನಡೆಸಿಬುಹರು॥
[19]ವೀರಪನಬರಹ

---

* ಸ್ಥಳದವರ ಪ್ರತಿಯಿಂದ.

9

ಅದೇ ದೇವಸ್ಥಾನದ ಮಹಾದ್ವಾರದ ಬಲಗಡೆ ಅರೇಬಂಡೆಯ ಮೇಲೆ.

[1]ಕದವನಿಲಿಸಿದು
[2]ನಳಸಂತ್ಸ
[3]ರದಭದ್ರಪ
[4]ದಬಹುಳ ೧ ಲು
[5]ಗಡಿಯಮಲ
[6]ಯಮಗಮಲ್ಯ
[7]ಯನು

10

ಅದೇ ಹೋಬಳಿ ಬೇಗಮಂಗಲದ ಹೆಬ್ಬಾಗಿಲ ಬಳಿ ನಟ್ಟ ವೀರಕಲ್ಲು.

[1]ಸ್ವಸ್ತಿಶ್ರೀಮನ್ಮಹಾಮಂಡಳೇಸ್ವರಶ್ರೀಮತ್ತ್ರಿಭುವನಮಲ್ಲವಿಷ್ಣು
[2]ವರ್ದ್ಧನಹೊಯ್ಸಳದೇವರುಸುಖರಾಜ್ಯಂಗೆಯುತ್ತಮಿರೆಸ್ವಸ್ತಿಸ
ಮ
[3]ಸ್ತಪ್ರಸಸ್ತಿಸಹಿತರಪ್ಪಶ್ರೀಮತು....ಮರಿಯನಾಯ್ಕರ
[4]ಮ..ನ. .....ವಗನೋಡ
[5]ಲ..ದಗ್ರಲಭ್ಯ..ಯಬಸವಗವುಡನಮಗಬಾಚ
[6]ಗವುಡಂಬೆಗೆವಡದಗವುಡಯೂರಳಿವಿನಲುಸರ್ಗ್ಗತನಾ
[7]...ದನ
[8]...ಪಮಿ
[9]...ಬರದ

11

ಅದೇ ಹೋಬಳಿ ಬೇಮಂಗಲ ಗ್ರಾಮಕ್ಕೆ ವಾಯವ್ಯ ಹೊಲೇರ ಕೊಡಗಿ ಜಮೀನನಲ್ಲಿ ನಟ್ಟ ವೀರಕಲ್ಲು.

[1]ಶ್ರೀಸ್ವಸ್ತಿಶ್ರೀ..
[2]ಲ್ಮನ್ದಿಎಱೆ.
[3]ಯಮ್ಮಜಗಿ
[4]ವನ್ದದತುಱು
[5]ಗೊಳೆಳ್ದುತಂನ
[6]ವರಮಗಚಿ
[7]ಬೀಯಮ್ಮಕ
[8]ಲ್ಲನಿಱಿಸಿದ
[9]ಳ ॥

12

ಅದೇ ಹೋಬಳಿ ದೊಡ್ಡಜಟ್ಟಕಾ ಗ್ರಾಮದ ಈಶ್ವರದೇವಸ್ಥಾನದೊಳಗೆ ರಂಗಮಂಟಪದ ತೊಲೆಯ ಮೇಲೆ.

[1]ಶ್ರೀಧಾರಿಣಿಯೊಳಗೆನೆಗರ್ದ್ದಮಾಹಮೇರುವೆನಲುಸಕಳಸಾಸ್ತ್ರದಾನವಿನೋದಂಧೀರಪರಾಕ್ರಮನೆನಿಸಿನೆಗಳ್ದಂಆರೈಯ್ವದೆಧರಿ
ತ್ರಿಯೊಳಗೆಹೆಮ್ಮಣನೆಂಬಂ ॥ ಆತನಗುಣಮ
[2]ತಿನೆಗರ್ದ್ದಮಾಹಭೂತಳದೊಳು । ಅಂನ್ನದಾನಪತಿಬ್ರತಾಗುಣದಿಂ । ಕ್ಯಾತಿಯೊಳೆಸೆದಳುಮಾತೇಂಪ್ರಿತ್ವಿಗೆಸೆವೆತಿರುವವ್ವೆಎಂಬ
ಳು ॥ ಆಇಬ್ಬರ್ಗ್ಗಂವುದಿಯ್ಸಿದಂಭಾವೋದ್ಭವಸಕಳಸಾ
[3]ಸ್ತ್ರಕ್ಯಾತಿವಿಳಾಸಂ । ಯಿಾವಗುಣದರನೆನಿಸಿನೆಗಳ್ದಂ । ಭಾವಿಸುವಡೆಏನಾರ್ತ್ತಿಜನಕ್ಕೆಧುರ್ಮ್ಮಣನೆಂಬಂ ॥ ಸ್ವಸ್ತಿಶ್ರೀಮತು
ಸಮಸ್ತಪ್ರಸಸ್ತಿಸಹಿತಂಹೊಯ್ಸಳಮಾಹಾಸಾಮಂ
[4]ನ್ತದುಮೆಯನಾಯಕರುಷಕವರಿಷ ೧೧೦೦ ವಿಕಾರಿಸಂವತ್ಸರದ । ಜೇಷ್ಟಮಾಸ । ಸುದ್ದ ।೫ । ಬ್ರಹಱ್ಪತಿವಾರದಂದುಕಲ್ಕಣಿ
ನಾಡಜೆಟ್ಟಿಗದಹೇಮೇಸ್ವರದೇವರದೇವಾಲ್ಯವಂಕಳಸನಿರ್ಬ್ಬಾಣವಾಗಿಮಾಡಿಸಿ ।
[5]ಆದೇವರಪೂಜೆಸುವಬಾಚಜೇಯಂಗೆಬಿಟ್ಟದತಿಮಣಿಯಮ್ಮನಕೆಱೆಬೆದ್ದಲೆಸ ೧ ಭೋಗದವರಿಗೆಕಂನ್ನೆಗೆಱೆದುಮ್ಮಸಮುದ್ರ
ದಲುಸ ೧। ಯೊಡೆಯರಹಳ್ಳಿಯಹೊಸಕೆ
[6]ಱೆಯಲುಸ ೧ । ಇಪ್ಪೊತ್ತಿನನಿವೇದ್ಯಕೆಹತ್ತುಮಾನಕ್ಕಿಯಪಡಿಗೆಹುಳಗಟ್ಟದಲುಸ ೧। ತಟ್ಟಹಳ್ಳದಕಂನ್ನೆಗೆಱೆಮಸಣಸಮು
ದ್ರದಲುಸ ೧। ನಿವೇದ್ಯದಮೇಲೆಱಹಕ್ಕೆ ಅಲಕೆಱೆ
[7]ಯಲುಕೊ ೧೦। ಮನಮೊಲುದಿಂನ್ತಿದನೆಯ್ದೆ ಕಾವಪುರುಷಂಗಾಯುಂಜಯಶ್ರೀಯುಮಕ್ಕೆ ಇದಂಕಾಯದೆಕಾಯ್ವಪಾಪಿಗೆಕುರು
ಕ್ಷೇತ್ರಾರ್ದ್ಧಿಯೊಳುವಾಣರಾಸಿಯೊಳೆಕ್ಕೋಟಿಮುನೀಂದ್ರ
[8]ರಂಕವಿಲೆಯಂವೇದಾಢ್ಯರಂಕೊಂದುದೊಂದಯಶಂಪೊರ್ದ್ದುಗುಮೆಂದ್ದುಸಾಱಿದಪುವೀಸೈಲಾಕ್ಷರಂಸನ್ಧತಂ ॥ ಸ್ವದತ್ತಂಪರ
ದತ್ತಂವಾಯೋಹರೇತ್ಸವಸುಂನ್ಧರಾಸಷ್ಠಿವರ್ಷಸಹಸ್ರಾಣಿವಿಷ್ಠಾಯಾಂಜಾಯತೇಕ್ರಿಮಿಃ ॥
[9]ಮಂಗಳಮಹಾ ಶ್ರೀ ಶ್ರೀ

13

ಅದೇ ದೇವಸ್ಥಾನದ ಹಿಂದೆ ಬಿದ್ದಿರುವ ಕಲ್ಲಿನಲ್ಲಿ.

[1]ವಿನೆಯಪರಂದುರ್ಮ್ಮಂಗಂ । ಕನಕಲತಾಮಧ್ಯವೆನಿಪ . . . . . .

[2]ವಂನೆಲೆಯಾಗಿಸಿದಂಭುವನಭವನದೊಳುಬಲ್ಲಾಳ . . . . . .

[3]ರಂ ॥ ದಾಯ್ಗರುಧುರದೊಳುತಡೆಕಾ . . ಳಲುಱೆಬೆ . . . . . .

[4]ಲೆಯಂಸೆಂಡಾಡುತಂತುಬರೆವರೆಕಡ . . ಮಲೆಯದಿರಿಂ . . . . . .

[5]ಗೆಯ್ಯದಿದಿರಾಂಪದಾಯ್ಗಮ್ರಿಗಕಂಠೀರವನುಮಿತನೆಂಬುದನಭಯ . . . . . .

[6]ಲ್ಲಬಾವನಬೀರಂ ॥ ಪದ್ಮೋದರಗತಿಭಕ್ತಂಸದುಗುಣಸಂಪೂರ್ಣ್ಣಸೌರ್ಯ್ಯನಪ್ರಮೇ . . . . . .

[7]ಪಸಸದರೀಗ . . ಗೆಸಿಂಹವಿಕ್ರಮಧವಳಂಕಂದರ್ಪ್ಪಂಯುವತೀಜನ . . ದೆನಿಲ್ಲದನತುಳ . . . . . .

[8]ದಡೆಜಯವಧುಬಂದುನೆಲಸಿದಳುಭುಜಯುಗದೊಳು ॥ ಶ್ರೀಯುವತಿಯುಖೇಲದ . . . . . .

[9]ಪ್ರಮಿತಪ್ರತಾಪಿಧಾತ್ರೀಯುವತಿಸಮಂಕಮಳನಾಭನ . . ಪ್ರಿಯದಿಂದಆಯ್ಮ . . . . . .

14

ಅದೇ ದೇವಸ್ಥಾನದ ಬಾಗಲ ಎಡಗಡೆ, ಗೋಡೆಯ ಮೇಲೆ.

[1]ಯಿಾಅಯ್ವತ್ತುಗೇಣುಗಡಿಭ

[2]ವಸಲಿಸದೆಕಿತ್ತವಂಗೆಕುಂ

[3]ಬಿನೀನರಕಸಂತಾನಕ್ಷಯ

[4]ವಕ್ಕುಂ

15

ಅದೇ ಗ್ರಾಮದ ಸೋಮೇಶ್ವರ ದೇವಸ್ಥಾನದ ಪೂರ್ವ್ವದಿಕ್ಕಿನಲ್ಲಿರುವ ಕಲ್ಲಿನಲ್ಲಿ.

ಪ್ರಮಾಣ 5′ × 2′ 8″.

[1]ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ ತ್ರೈಳೋಕ್ಯನಗರಾರಂಭಮೂಲಸ್ತಂಭಾಯಸ್ವಯಂಭುವೇ ।

[2] . . . . . .

[3] . . . . . ವಸ್ತುಬ್ರಾತೋದ್ಭವಸ್ಥಾನಕಮತಿಶಯಸತ್ವಾವಳಂಬಂಗಭೀರಂಪ್ರಸ್ತುತ್ಯಂ . .

[4] . . . . . ಹೊಯ್ಸಳೋರ್ವ್ವೀಶವಂಶಂ ॥ ಅದಱೊಳುಕೌ . . . .

[5] . . ದೊಂದನರ್ಘ್ಯಗುಣಮಂದೇವೇಭದುದ್ದಾಮಸತ್ವದಗುರ್ವ್ವಂಹಿಮರಶ್ಮಿಯುಜ್ವಳಕಳಾಸಂಪತ್ತಿಯಂಪಾರಿಜಾತದುದಾರತ್ವ ದಪೆಂಪನೋ

[6]ರ್ವ್ವನೆನಿತಾನ್ತಂತಾಳ್ದಿತಾನಲ್ತೆಪುಟ್ಟಿದನುದ್ವೇಜಿತವೀರವೈರಿವಿನೆಯಾದಿತ್ಯಾವನೀಪಾಳಕಂ॥ ಕಂ॥ ವಿನೆಯಂಬುಧರಂರಂಜಿಸೆಘನತೇ

[7]ಜಂವೈರಿಬಲಮಲಱಿಸಿನೆಗಳ್ದಂವಿನಯಾದಿತ್ಯನೃಪಾಳಕನನುಗತನಾಮಾರ್ತ್ಥನಮಳಕೀರ್ತ್ತಿಸಮರ್ತ್ಥಂ ॥ ಆವಿನಯಾದಿತ್ಯನ

[8]ವಧುಭಾವೋದ್ಭವಮಂತ್ರದೇವತಾಸನ್ನಿಭೆಸದ್ಭಾವಗುಣಭವನಮಖಿಳಕಳಾವಿಳಸಿತೆಕೆಳೆಯಬರಸಿಯೆಂಬಳುಪೆಸರಿಂ॥ . . . . . .

[9] . . . . . ತನೂಭವನಾದಂಶಚಿಗಂಸುರಾಧಿಪತಿಗಂಮುನ್ನೆನ್ತಾ . . . . . ವಿಷಾದವಿದೂರಾನ್ತರಂಗನೆಱೆ ಯಂಗೆ

[10]ನ್ರಿಪಂ ॥ ಆತಂಚಾಳುಕ್ಯಭೂಪಾಳನಬಲದಭುಜಾದಂಡಮುದ್ದಂಡಭೂಪಬ್ರಾತಪ್ರೋತ್ತುಂಗ . . . . . ವಂದಿಸಸ್ಯಾ

[11]ಘಮೇಘಂಶ್ವೇತಾಂಭೋಜಾತದೇವದ್ವಿರದನಶರದಭ್ರೇಂದುಕುಂದಾವದಾತಪ್ರೋದ್ಯದ್ಯಶಶ್ಶ್ರೀಧವಳಿತಭುವನಂವೀರನೇ

[12] . . . . . ಕಡುಪಿನೆಱೆ

[13] . . . . . ನೆಗಳ್ದ . . . . . ದೊಱೆ

[14] . . ಗಭೂ . . . . . ನೃಪಾಳತಿಳಕನಂಗನೆಚಲ್ವಿಂಗೆರವಟ್ಟುಕೀಲ

15ಗುಣದಿಂನೆಱೆದೇಚಲದೇವಿಯೆನ್ತುನೋನ್ತರುಮೊಳರೇ ॥ . . . . . ತನೂಭವರ್ನ್ನೆಗಳ್ಗರಲ್ತೆಬಲ್ಲಾಳಂವಿಷ್ಣು

16ನೃಪಾಳಕನುದೆಯಾದಿತ್ಯನೆಂಬಪೆಸರಿಂದಮಖಿಳವಸುಧಾತಳದೊಳ್ ॥ ಅವರೊಳುಮಧ್ಯಮನಾ

17ಗಿಯುಂಭುವನದೊಳುಪೂರ್ವ್ವಾಪರಾಂಭೋಧಿಯೆಯ್ದುವಿನಂಕೂಡಿನಿಮಿರ್ಚ್ಚುವೊಂದುನಿಜಬಾಹಾವಿಕ್ರಮಕ್ರೀಡೆಯುದ್ಭವ

18ದಿಂದುತ್ತಮನಾದನುತ್ತಮಗುಣಬ್ರಾತೈಕಧಾಮಂಧರಾಧವಚೂಡಾಮಣಿಯಾದವಾಬ್ಜದಿನಪಂಶ್ರೀವಿಷ್ಣು

19ಭೂಪಾಳಕಂ ॥ ಕ ॥ ಎಳೆಗೆಸವಕೋಯತೂರ್ತ್ತಳವನಪುರಮಂತೆರಾಯರಾಯಪುರಂಬಳ್ವಳಬಳೆದವಿ

20ಷ್ಣುತೇಜೋಜ್ವಳನದೆಜೆಂದವುಬಳಿಷ್ಟರಿಪುದುರ್ಗ್ಗಂಗಳು ॥ ಇನಿತುಂದುರ್ಗ್ಗಮವೈರಿ . . . . ಯಮಂಕೊಂಡಂನಿಜಾ

21ಕ್ಷೇಪದಿಂದಿನಿಬರ್ಬ್ಬೂಪರನಾಜೆಯೊಳುತವಿಸಿದಂತಂನಸ್ತ್ರಸಂಘಾತದಿಂದಿನಿಬರ್ಗ್ಗಾನತರ್ಗಿತ್ತ

22ನುದ್ಭಪದಮಂಕಾರುಣ್ಯದಿಂದೆಂದುತಾನನಿತಂಲೆಕ್ಕದೆಪೇಳ್ವಡಬ್ಜಭವನುಂವಿಭ್ರಾಂನ್ತನಪ್ಪಂಬಲಂ॥ . . .

23ಮಳೋಕ್ಯ . . . . . ಪೋತ್ತಮಂವಿಬುಧಲೋಕೋ . . ದನದ್ವಿಷ್ಟದೈತ್ಯಮದಧ್ವಂಸನನಂನ್ತಭೋಗಯುತ

24ನುರ್ವ್ವೀಭಾರದೊಂ . . ನುತಂಮಸತ್ವಾನ್ವಿತನುದ್ಭಯಾದವಕುಳಾಳಂಕಾರನೆಂದಿಂತುವಿಷ್ಣುಮಹೀ . . ಸಲ್ಲೆ

25 . . ನೆವಿಷ್ಣುವೆ . . . ಲಕ್ಷ್ಮೀವಧೂವಲ್ಲಭಂ ॥ ಲಕ್ಷ್ಮೀದೇವಿಖಗಾಧಿಪಲಕ್ಷ್ಮಂಗೆಸದಿರ್ದ್ದವಿಷ್ಣುಗೆಂನ್ತಂತೆ

26ವಲಂಲಕ್ಷ್ಮಾದೇವಿಲಸನ್ಮ್ರಿಗಲಕ್ಷ್ಮಾನನೆವಿಷ್ಣುಗಗ್ರಸತಿಯೆನೆನೆಗಳ್ದಳು ॥ ವೃ ॥ ಅವರ್ಗ್ಗಮನೋಜನಂ

27ನ್ತೆಸುದತೀಜನಚಿತ್ತಮನಿಳ್ಕೊಳಲ್ತೆಸಾಲ್ವವಯವಶೋಭೆಯಿಂದತನುವೆಂಬಭಿಧಾನಮನಾನದಂಗ

28ನಾನಿವಹವಮನೆಚ್ಚುಮುಯ್ವನಣಮಾನದೆಬೀಠರನೆಚ್ಚುಯುದ್ಧದೊಳುತವಿಸುವನಾದನಾತ್ಮಭವನಪ್ರತಿಮಂನರಸಿಂಹಭೂಭು
ಜಂ ॥

29ಪಡೇಮಾತೇಂಬಂದುಕಂಡಂಗಮ್ರಿತಜಳಧಿತಾಂಗರ್ವ್ವದಿಂಗಂಡವಾತಂನುಡಿವಾತಂಗೇನನೆಂದೈಪ್ರಳಯಸಮೆಯದೊಳುಮೇ
ಱೆಯಂ

30ಮೀಱಿಬರ್ಪ್ಪಾಕಡಲಂನ್ನಂಕಾಳನನ್ನಂಮುಳಿದಕುಳಿಕನನ್ನಂಯುಗಾನ್ತಾಗ್ನಿಯಂನ್ನಂ ಸಿಡಿಲನ್ನಂಸಿಂಗದಂನ್ನಂಪುರಹರನುರಿಗ
ಣ್ಣನ್ನನೀನಾ

31ರಸಿಂಹಂ ॥ ರಿಪುಸರ್ಪ್ಪದ್ದರ್ಪ್ಪದಾವಾನಳಬಹಳಃಖಾಜಾಳಕಾಳಾಂಬುವಾಹಂರಿಪುಭೂಪೋದ್ಯತ್ಪ್ರದೀಪಪ್ರಕರಪಟುತರಸ್ಫಾ

32ರಝಂಝಾಸಮೀರಂರಿಪುನಾಗಾನೀಕತಾರ್ಕ್ಷ್ಯಂರಿಪುನ್ರಿಪನಳಿನೀಷಂಡವೇದಂಡರೂಪಂರಿಪುಭೂಭ್ರಿದುಭೂರಿವಜ್ರಂರಿಪುನ್ರಿ

33ಪಮದಮಾತಂಗಸಿಂಹಂನೃಸಿಂಹಂ ॥ ಲಲನಾಲೀಲೆಗೆಮುನ್ನವೆನ್ತುಕುಸಮಾಸ್ತ್ರಂಪುಟ್ಟಿದಂವಿಷ್ಣುಗಂವಿಲಸಲ್ಲಕ್ಷ್ಮಿಗವಂ

34ತೆವೀರನರಸಿಂಹಕ್ಷೋಣಿಪಾಳಂಗೆಏಚಲದೇವೀಪ್ರಿಯೆಗಂಪರಾರ್ತ್ಥಚರಿತಂಪುಣ್ಯಾಧಿಕಂಪುಟ್ಟಿದಂಚಲದಿಂದಾಂನ್ತರಿಭೂ

35 . . . ಕುಳಿಸಂಬಲ್ಲಾಳಭೂಪಾಳಕಂ ॥ ಗತಲೀಳಂಲಾಳನಾಳಂಬಿತಬಹಳಭಯೋಗ್ರಜ್ವರಂಗೂರ್ಜ್ಜರಂಸಂಧೃತಸೂಳಂಗೌಳ
ನುಚ್ಚೈ

36ಕರಧೃತವಿಲಸತ್ಪಲ್ಲವಂಪಲ್ಲವಂಚೂರ್ಣ್ಣಿತಚೋಳಂಚೋಳನಾದಂಕದನವದನದೊಳುಭೇರಿಯಂಪೊಯ್ಯೆವೀರಾಹಿತಭೂ

37ಭ್ರಿಜ್ಜಾಳಕಾಳಾನಳನತುಳಬಳಂವೀರಬಲ್ಲಾಳದೇವಂ॥ಆತನಕೀರ್ತ್ಯವತಾರವೆಂನ್ತೆಂದಡೆ॥ಸ್ವಸ್ತಿಸಮಧಿಗತಪಂಚಮಹಾಶಬ್ದಮ

38ಹಾಮಂಡಳೇಶ್ವರಂ । ದ್ವಾರಾವತೀಪುರವರಾಧೀಶ್ವರಂ । . . . . . ಬಳಜಳಧಿಬಡಬಾನಳಂ । ದಾಯಾದದಾವಾನಳಂ । ಪಾಂಡ್ಯ
ಕುಳಕಮ

39ಳವೇದಂಡಗಂಡಭೇರುಂಡಮಂಡಳಿಕಬೇಂಟೆಕಾಱಂ । ಚೋಳಕಟಕಸೂಱೆಕಾಱಂ । ಸಂಗ್ರಾಮಭೀಮಂ । ಕಲಿಕಾಲಕಾಮಂ ।
ಸಕಳವಂನ್ದಿ

40ಬ್ರಿಂನ್ದಸಂನ್ತರ್ಪ್ಪಣಸಮಗ್ರವಿತರಣವಿನೋದಂ । ವಾಸಂತಿಕಾದೇವೀಲಬ್ಧವರಪ್ರಸಾದಂ । ಯಾದವಕುಲಾಂಬರದ್ಯುಮಣಿಮಂ

41ಡಳಿಕಮಕುಟಚೂಡಾಮಣಿ । ಕದನಪ್ರಚಂಡಮಲಪರೊಳುಗಂಡನಾಮಾದಿಪ್ರಸಸ್ತಿಸಹಿತಂಶ್ರೀಮತ್ತ್ರಿಭುವನಮ

42ಲ್ಲತಳಕಾಡುಕೊಂಗುನಂಗಲಿಬನವಸೆಹಾನುಂಗಲ್ಲುಯುಚ್ಚಂಗಿಗೊಂಡಭುಜಬಳವೀರಗಂಗನಸಹಾಯಸೂ

43ರಸನಿವಾರಸಿದ್ಧಿಗಿರಿದುರ್ಗ್ಗಮಲ್ಲಚಲದಂಕರಾಮನಿಃಸಂಕಪ್ರತಾಪಹೊಯ್ಸಳವೀರಬಲ್ಲಾಳದೇವರುದಕ್ಷಿಣಮಹೀಮಂಡಳ

44ಮಂದುಷ್ಟನಿಗ್ರಹಶಿಷ್ಟಪ್ರತಿಪಾಳನಪೂರ್ವ್ವಕಂದೋರಸಮುದ್ರದನೆಲೆವೀಡಿನಲುಸುಖಸಂಕಥಾವಿನೋದದಿಂಪ್ರಿತ್ವೀರಾಜ್ಯಂಗೆ

45ಯ್ಯುತ್ತವಿರಲು ॥ ಸ್ವಸ್ತಿಶ್ರೀಮತುಗೋತ್ರಪವಿತ್ರಂಶ್ರೀತಳೆಕಾಡುನಾಡಾಳ್ವರಾಜಾಧಿರಾಜಮಾರಸಿಂಗಗಾವುಂಡಂ । ಆತನತತ್ಪು
ತ್ರಂಸಮಯಸ

46ಮುದ್ಧರಣಶ್ರೀತಳೆಕಾಡುಪಟ್ಟಣಸಮುದ್ಧರಣರಪ್ಪಪುರುಷಮಾಣಿಕ್ಯಸಟ್ಟಿ । ಆತನತತ್ಪುತ್ರಂನುಡಿದಂತೆಗಂಡಪರಾಕ್ರಮಧ
ವಳಂ

[47]ಜಟ್ಟಿಗವಂ . . ವಾಗಿದ್ದರ್ದಂವ್ವೂರುಮೂಡಿಹಳ್ಳವಾದುವಂಕೆಜ್ಜೆಯಾಗಿಕಟ್ಟಿಸಿದನುದ್ಯೋಗವುಲ್ಲಂಮಾಹಾಸಾವಮಂನ್ತ ಹುಳ್ಳಿಯು ನಾಯ

[48]ಕಂ । ಆತನತತ್ಪುತ್ರಂಸ್ವಸ್ತಿಸಮಸ್ತ ಗುಣಸಂಪನ್ನ ಆಹಾರಾಭಯನುಸಾಸ್ತ್ರದಾನವಿನೋದನುಂ । ಜಿನಸಮಯಸ

[49]ಮುದ್ಧರಣಂಪಾರಿಷದೇವರಪಾದಾಶಾಧಕನುಂ। ಬಂಟರಬಾವನುಂನಂಟರಂಗರುಕನುಂಬಡಗೆಜ್ಜೆಮಲ್ಲನುಂಕೂಡಿತಪ್ಪುವನಾಯ

[50]ಕರಗಂಡನುಡಿದಂನ್ತೆ ಗಂಡವಮಾಕ್ರ್ಕೋಲಭೈರವಂ ಮಾಹಾಸಾವಮಂನ್ತ ಹೆಮ್ಮೆಯನಾಯಕಂ ॥ ಆತನಸುಪುತ್ರಂಮಾತೇಂಧರಿತ್ರಿ ಯೊಳಗೆಸಾ

[51]ಸ್ತ್ರದಾನವಿನೋದಂಕ್ಯಾತಿಭುಜಾಕ್ರಮನೆನಿಸಿನೆಗಳ್ದೀಂಮಾತೊಧರಿತ್ರಿಗೆನೆಯೆಧುರ್ಮ್ಮಣನೆಂಬಂ ॥ ಹರಿಹರಹಿರಣ್ಯಗರ್ಬ್ಭನುಕ ರಕಿರಣನುದುರಿತದೂ

[52]ರನುಂಸರಸ್ವತಿಯುಂಪರಮಾರ್ತಂಕಲಿದುವ್ಮಂಗೆಸ್ತಿ . ವಾಗಿರೆಪರಸಿರಕ್ಷೆಗಟ್ಟಿದರಾಗಳು ॥ ಶ್ರೀಲಕ್ಷ್ಮಿನಿಂವ್ಮಭುಜದೊಳುಆಗ ಳುನೆಲಸಿರುವಳಾಕೆಜಂಬುದ್ವೀ

[53]ಪದೊಳೆಲ್ಲಂಖ್ಯಾವಿಸಿಕಲಿದುವ್ಮನಕ್ಯಾತಿಯಭಾವನೆಯಿಂಪೇಳಲ್ತ್ತಿ ಬಗೆದೆನನುಪಮಭದ್ರಂ ॥ ಕ್ಷೀರಾಬ್ಧಿಸಮುದ್ರದೊಳುದಿಯ್ಸಿದ ನಾರೆಯರುಮಿ

[54]ಡುವಧುಸರಸ್ವತಿಲಕ್ಷ್ಮಿಯೆಂಬೀಸತಿಯರುವೀರಕಲಿದುರ್ಮ್ಮನಂಭುಜದಲುಯೋರನ್ತಿರೆನಿನ್ದುಕೂತ್ತುರಕ್ಷಿಸುತ್ತಿರ್ಪ್ಪರು ॥ ಆತನಕೀರ್ತ್ಯವತಾರ

[55]ವೆನ್ತೆಂದಡೆಸ್ವಸ್ತಿಶ್ರೀಮತುಜಕತುಸಮಯಸಮುದ್ಧರಣಂಧರಣಿದೇವತಾರುದ್ರನುಂ। ಆಹಾರಾಭಯನುಂ । ಗೋತ್ರಪವಿತ್ರನುಂ। ಬಂಟರಬಾ

[56]ವನುಂನಂಟರಂಗರುಕನುಂ । ನುಡಿದಂನ್ತೆಗಂಡನುಂ । ಚಲಕೆಬಲುಗಂಡ । ತಪ್ಪೆತಪ್ಪುವಂತನುದಟ್ಟಿಬಡಿವಂ । ಮಗುರ್ದಡೆಜ್ಜೆ ಪ್ಪುವ । ಕೂಡಿತ

[57]ಪ್ಪುವನಾಯಕರಗಂಡ । ಕನ್ನೆಗೆಜ್ಜೆಮಲ್ಲ। ಮೆಚ್ಚರಿಪನಾಯಕರಗಂಡ್ಡತೊಡದ್ದರಂಕುಸಗಾಂಡ್ಡವರಾನೆಹೊಯ್ಸಳಮಹಾಸಾ ವಮಂನ್ತದುಮ್ಮೆಯ

[58]ನಾಯಕರು । ವಿಕಾರಿಸಂವತ್ಸರದಜೇಷ್ಠವುಸದಸುದ್ಧ ೫ ಬ್ರಿಹಜ್ಪತಿವಾರದಂನ್ದು । ಕಲ್ಲ . ನಃಡಜೆಟ್ಟಿಗದಹೇವೇಸ್ವರದೇ ವರ . . . .

[59] . . ವಾಕಳಸನಿರ್ವಾಣವಾಗಿಗೆಯ್ಸಿ।ಆದೇವರಪ್ರಜಿಸುವಬಾಚಜೀಯಂಗೆಬಿಟ್ಟದತ್ತಿ ।ಮಣಿಯಮ್ಮನಕೆಜ್ಜೆ । ಬದ್ದಲಿಸ ೧ ಭೋ ಗಕೆಕ

[60]ನ್ನೆಗೆಜ್ಜೆಗೆದುಮ್ಮಸಮುದ್ರದಲುಸ ೧ ಒಡೆಯರಹಳ್ಳಿಯಹೊಸಕೆಜ್ಜೆಯಲುಸ ೧ ನಿವೇದ್ಯಇಪ್ಪೊತ್ತಿಂಗೆಹತ್ತುಮಾನಕ್ಕಿಯಪಡಿ ಗೆ । ಹುಳ್ಳ

[61]ಗಟ್ಟದಲುಸ ೧। ತಟ್ಟಹಳ್ಳದಕನ್ನೆಗೆಜ್ಜೆಮಸಣಸಮುದ್ರದಲುಸ ೧। ನಿವೇದ್ಯದವೇಲಿ . .ಹಕೆಲಲಕೆಜ್ಜೆಯಲುಕೊ ೧೦॥ ಮು ನವೊ . .

[62]ದಿನ್ತಿದನೆಯ್ದಿಕಾವಪುರುಷಂಗಾಯುಂಜಯಶ್ರೀಯುಮುಕ್ತೆಯಿದಂಕಾಯದೆಕಾಯ್ವಪೊಪಿಗೆಕುರುಕ್ಷೇತ್ರಾರ್ದ್ದಿಯೊಳುಬಾಣರಾಸಿ ಯೊ . .

[63]ಕೋಟಿಮುನೀಂದ್ರರಂಕವಿಲೆಯುಂವೇದಾಜ್ಞರಂಕೊಂದುಬೊಂದಯುಸಂಪೊದ್ದರ್ಗುವೆಂದುಸಾಱುದಪುದೀಸೈಲಾಹ್ಲರಂಸನ್ತ ತಂ ॥ ಸ್ವದತ್ತಂಪರದತ್ತಂವಾ

[64]ಯೋಹರೇತಿವಸುಂಧರಾಂಷಷ್ಟಿವರ್ಷಸಹಾಸ್ರಾಣಿವಿಷ್ಠಾಯಾಂಜಾಯತೇಕ್ರಿಮಿಃವುಂಗಳವುಹಾಶ್ರೀ ಶ್ರೀ ನೆಟ್ಟನೆವಸುಧಾಕ

[65]. ದೊಳುಪುಟ್ಟದವಸ್ತುಗಳಿನಲ್ಕೆ ಮುಕ್ತಾಫಳವುಂಬಿಟ್ಟದವನಾಯ್ದುಕೊದವ್ರೊಲೆಸೆಟ್ಟಿಗೆಪ್ರಭೂತವಮಾ . . . ಗುಜಾನವಮಯ್ಯನೆ ಪರೆದಾ . . . .

16

ಬಿಂಡಿಗನವಲೆ ಹೋಬಳಿ ಬಿಂಡಿಗನವಲೆಯಲ್ಲಿ ಕೇಶವದೇವನಸ್ಥಾನದ ಬಾಗಿಲ ಎಡಗಡೆ ಕಂಭದಲ್ಲಿ.

[1]ಸ್ವಸ್ತಿಶ್ರೀವಿಕ್ರುತಿಸಂ
[2]ವತ್ಸರದಪುಶ್ಯಕು
[3]ದ ೧೦ ಶುಕ್ರವಾರ
[4]ದಲುಶ್ರೀಮತಾತಾಚಾ
[5]ಸವಲರವರಧರ್ಮ್ಮ
[6]ದಕಂಬಾ । ಶ್ರೀ

17

ಅದೇ ದೇವಸ್ಥಾನದ ದೇಶಿಕರ ಗುಡಿಯ ಪಶ್ಚಿಮದ ಕಂಭದಲ್ಲಿ.

[1]ಧಾತುಸಂವತ್ಸ
[2]ರದಶ್ರಾವಣಭ ೧೦
[3]ಲೂಯಿನ್ನೊಂದುಕಂ

[4]ಭದಧರ್ಮ್ಮತೊಟಿಲ
[5]ಸಟಿತಿಂಮನಟಿವು
[6]ಡಿದದುಕೇಶವರಿಗೆ

[7]ಶ್ರೀ ಶ್ರೀ ಶ್ರೀ

18

ಆದೇ ಮುಂಟಿಸದ ಪೂರ್ವಕಡೆ ಕಂಭದಲ್ಲಿ.

[1]ಶ್ರೀಧಾತುಸಂವತ್ಸರ
[2]ದಶ್ರಾವಣಬ ೧೦ ಲೂ
[3]ಯಿನ್ನೊಂದುಕಂಭದ

[4]ಧರ್ಮ್ಮಕೆಂಪಿನಟಿಯುವು
[5]ಗವೊಡುವನಟಿವಮಾಡಿ
[6]ದುಕೇಸವದೇವರಿಗೆಮಂ

[7]ಗಳಮಹ ಶ್ರೀ ಶ್ರೀ

19

ಅದೇ ಹೋಬಳಿ ಕಂಬದಹಳ್ಳಿಯ ಕಂಬದರಾಯನ ಕಂಬದ ಬುಡದಲ್ಲಿ.

ದಕ್ಷಿಣಮುಖ.

[1]ಭದ್ರಮಸ್ತು ಜೆನಶಾಸನಸ್ಯ ॥ ಶ್ರೀಸೂರಸ್ಥಗಣೇಜಾತಶ್ಚಾರುಚಾ
[2]ರಿತ್ರಭೂಧರಃಭೂಪಾಳಾನೆತಪಾದಾಪ್ಜೋರಾದ್ಧಾನ್ತಾರ್ಣ್ಣವಪಾರಗಃ ।
[3]ಆದಾವನನ್ತವೀರ್ಯ್ಯಸ್ತಚ್ಛಿಷ್ಯೋಬಾಳಚನ್ದ್ರಮುನಿಮುಖ್ಯಸ್ತತ್ಸೂ
[4]ನುರ್ಜ್ಜಿತಮದನಸ್ಸಿದ್ಧಾನ್ತಾಂಭೋನಿಧಿಪ್ಪ್ರಭಾಚನ್ದ್ರಃ ॥ ಶಿಷ್ಯಮ್ತ
[5]ಲ್ಲಿಲೆದೇವಸ್ತಸ್ಯಭೂತ್ತನ್ಮನೀಷಿಣಸ್ಸೂನುರ್ವ್ವಿಭ್ವಸ್ತಮದನದರ್ಪ್ಪೋ
[6]ಗುಣಮಣಿರಪ್ಪೋಷವಾಸಿಪಮುನಿಮುಖ್ಯಃ ॥ ತಸ್ಮಾಚ್ಚೋವಿಬುಧಾ
[7]ಧೀಕೋಹೇವುನನ್ದಿ ಮುನೀಶ್ವರಃರಾದ್ಧಾನ್ತಪಾರಗೋಜಾತಸ್ಸೂರಸ್ಥಗ
[8]ಣಭಾಸ್ಕರಃ ॥ ತದನ್ತೇವಾಸಿನಾವಾದ್ಯೋವಾದ್ಯತಾಮಿನ್ದ್ರಿಯ
[9]ದ್ವಿಷಾಂಯತಿರ್ವ್ವಿನಯನನ್ದೀತಿವಿನೇತಾಭೂತ್ತ ಪೋನಿಧಿಃ ॥ ನಾಡೊ
[10]ಳಗಿದೆನೆದಗೋಸನೆಬುಡಂಗಳ್ಗೆ ಱಗಿದನ್ದೆ ಮುನಿವನಿತೆಯರೊ
[11]ಳ್ಮೂಡಿದನೆಂಬೀನುಡಿಯದನೇಡಿಪುದೆಲೆವಿನಯನನ್ದಿದೇವರಱ
[12]ರಿತಂ ॥ ಒನ್ದನೆಕೇಳಿಂಬುಧಜನವೆನ್ದಿಂಗಂಸುಹ್ಮೆನೀವೆವಸುಧಾತಳದೊ
[13]ಳ್ಪನ್ದಿಱ್ದಿವಧೂನಿವಹಂತನ್ದೆಯವಧುವೆನ್ದಪ್ಪೊಂಪ್ರಿಯುಂಬದದಾನಿ ॥
[14]ಬ್ರತಸಮಿತಿಗುಪ್ತಿಗುಪ್ತೋಜಿತಮೋಹಪರೀಷಹೋಬುಧಸ್ತುತ್ಯೋ
[15]ಹತಮದಮಾಯಾದ್ವೇಷೋಯತಿಪತಿತತ್ಪಾನುರೇಕವೀರೋಭೂತ್ ॥

ಪೂರ್ವ್ವಮುಖ.

[16]ದಾನದಪೆಮ್ಪುದೀನಜನಕೋಟಿಗೆಕಲ್ಪಕುಜಾಳಿನೋಡಿಸನ್ಮಾನದಪೆಂಪ್ರಭವ್ಯ
[17]ಜನಸಂಕುಳವನ್ತಭಿಪಿತ್ತು ದಾನಸನ್ಮಾನತಪೋಷವಾಸಗುಣನನ್ತ ತಿಯಂ
[18]ಸಲೆತಾಳ್ದಿದಜ್ಜಗನ್ಮಾನಿಗಳ್ಕೇಕವೀರಮುನಿನಾಥರೆಜಂಗಮತೀರ್ತ್ಥವಲ್ಲರೇ ॥
[19]ತಸ್ಯಾನುಜಸ್ಸಕಳಶಾಸ್ತ್ರಮಹಾರ್ಣ್ಣವೋಭೂದ್ಭವ್ಯಾಬ್ಜಷಣ್ಡದಿನ

[20]ಕೃನ್ಮನಿಪುಣ್ಡರೀಕೋವಿಧ್ವಸ್ತಮನ್ಮಥಮದೋಮಳಗೀತಕೀರ್ತ್ತಿಶ್ರೀಪಲ್ಲ
[21]ಪಣ್ಡಿತಯತಿರ್ಜ್ಜಿತಪಾಪಶತ್ರುಃ ॥ ಪಲ್ಲಕೀರ್ತ್ತಿರ್ಯ್ಯಥಾರೂಢಃಪು
[22]ರಾವ್ಯಾಕರಣೇಕೃತೀತಥಾಭಿಮಾನದಾನೇಷುಪ್ರಸಿದ್ಧಃಪಲ್ಲಪಣ್ಡಿತಃ ।
[23]ಪಲ್ಲಪಣ್ಡಿತನಾಗೇನದದತಾದಾನಮದ್ಭುತಂಭೂಷಿತಂಕಲಿಕಾಳೇಸ್ಮಿ
[24]ನ್ಗಂಗಮಣ್ಡಲಕಾನನಂ ॥ ಸೂರಸ್ಥಗಣಗೀರ್ವ್ವಾಣಮಾರ್ಗ್ಗಮಾಳಂಬ
[25]ತೇಧುನಾದಾನಪ್ರಭಾಪ್ರಕಾಶೋಯಂಪಲ್ಲಪಣ್ಡಿತಚನ್ದ್ರಮಾಃ ॥
[26]ದಾನವಾರಿಪರಿಪೂರಿತಸಿನ್ಧುರ್ನ್ನಷ್ಟಮೋಹತಿಮಿರೋಗುಣಬನ್ಧುಃ
[27]ಭವ್ಯಲೋಕಕುಮುದಾಕರಚನ್ದ್ರಃಪಲ್ಲಪಣ್ಡಿತಮುನಿರ್ಹತತನ್ದ್ರಃ ।
[28]ನಾನಾದೇಶಸಮಾಗತೇನಗುಣಿನಾಲೋಕೇನಸಂಸೇವಿತೋಜೀರ್ಣ್ಣೇ
[29]ನಾಭಿನವೇನನೂತನತನುಶ್ರೀಲಕ್ಷಣೈರ್ಲ್ಲಕ್ಷಿತಃಸುಂಭದ್ಭೂ
[30]ರಿಗುಣಾಳಯೋಮತಿಮತಾಮಗ್ರೇಸರೋರಾಜತೇದೇಶೇಸ್ಮಿನ್ನಭಿಮಾ
[31]ನದಾನಿಕಮುನಿಸ್ಸರ್ವ್ವಾರ್ತ್ಥಚಿನ್ತಾಮಣಿಃ ॥ ವಿದ್ವಜ್ಜನಾನನ್ದನಕಾರಣೇನದಾನೇ
[32]ನಭಕ್ತ್ಯಾಮುನಿಪುಂಗವೇಷುದಿಗನ್ತವಿಶ್ರಾನ್ತಯಶೋನಿಧಾನಂವಿರಾಜತೇಪಣ್ಡಿತಪುಣ್ಡರೀಕಃ ॥.

ಉತ್ತರಮುಖ.

[33]ನಾನಾಭಿಮಾನಿಜನದಾನವಿಧಾನಧೀತೋಧೀಮಾನಶೇಷಜನತಾಮನಸೋಭಿರಾ
[34]ಮ[ಃ]ಜಾತೋಭಿಮಾನಿಪದಪೂರ್ವ್ವಕದಾನಿನಾಮ್ನಾಖ್ಯಾತಃಖಳೀಕೃತಮಹಾಕಳಿಕಾ
[35]ಳದೋಷಃ ॥ ಸಾಭಿಮಾನೇಜನೇಭೀಷ್ಟಮಭಿಮಾನಮಖಣ್ಡಯನ್ಜಾತೋಭಿಮಾ
[36]ನದಾನೀಹಯಥಾರ್ತ್ಥಃಪಲ್ಲಪಣ್ಡಿತಃ ॥ ಅತಿಸಯಮಾಗೆದಾನದೊ
[37]ಳೆಬೇರ್ವ್ವರಿದೊಳ್ಪುನಯೋಕ್ತಿಯೆಂಬಸನ್ಮತಿಯೊಳೆಪುಟ್ಟಿಶಾಸ್ತ್ರದೊ
[38]ಳೆದಾಂಗುಡಿವೋಗಿವಿಶೇಷಮಪ್ಪಸನ್ನುತಗುಣದೋಳಿಯಿನ್ದೆಮಡಲಾ
[39]ಗಿದಿಗನ್ತಮನೆಯ್ದೆಪಲ್ಲಪಣ್ಡಿತರವಿಳಾಸಕೀರ್ತ್ತಿಲತೆಪರ್ವ್ವಿದುದುರ್ವ್ವಿಗೆ
[40]ಚೋದ್ಯಮಪ್ಪಿನಂ ॥ ಸುರಕರಿಯಕಾಮಧೇನುವಸರದಭ್ರದಕಾನ್ತಿ
[41]ಯಂಪುದುಂಗೊಳಿಸುತ್ತುಂಶರದಮಳಚನ್ದ್ರಬಿಂಬದದೊರೆಗೆಮಿಗಿಲೆ
[42]ಪಾಲ್ಯಕೀರ್ತ್ತಿದೇವರಕೀರ್ತ್ತಿ ॥ ದಾನಮಪರಿಮಿತಮೊಳ್ಪಭಿಮಾನಂಸತ್ಕವಿ
[43]ತೆಶಾಸ್ತ್ರನಿಪುಣತೆಕೀರ್ತ್ತಿಸ್ಥಾನಮೆನೆಸನ್ದೆರೀಗಳ್ದಾನಿಗಳಭಿಮಾನದಾ
[44]ನಿಗಳ್ವಸುಮತಿಯೊಳ್ ॥ ವನನಿಧಿವೇಷ್ಟಿತಧಾತ್ರಿಯೊಳನವರತಂ
[45]ನೆರೆದದೀನಜನರಿಂಗೆಲ್ಲಂಧನಕನಕರ್ಮ್ಮಟ್ಟಿಸ್ಸನ್ಮನದಿನ್ದಂಪಾಲ್ಯಕೀರ್ತ್ತಿಪ
[46]ಣ್ಡಿತದೇವರ್ ॥ ಏವೊಗಟ್ಟುದಣ್ಣವಿಬುಧಜನಾವಳಿಗಂಬೇಡಿದರ್ತ್ಥಿಜನಕ
[47]ನ್ನಿಚ್ಛನ್ದೇವತರುಕುಡುಪತೆಱದನ್ತೀವರ್ಸ್ಸಲೆಪಲ್ಲಪಣ್ಡಿತರ್ವ್ವಸುಮತಿಯೊಳ್

ಪಶ್ಚಿಮಮುಖ.

[48]ಪುಡವಿಯೊಳಗ್ಗಳನ್ನೆಗಟ್ಟಿದಾನಿಗಳನ್ನಿವರನ್ನರಾರೊಪೇಟ್ಟುಡಿಯದಿರಾರು
[49]ಮಂಮರುಳೆಕಳ್ಪಮಹೀಜದಕೋಡಿನನ್ತೆಕೋಡುಡುಗದೆನಗ್ನಭಗ್ನನಬಗಾಯಕ
[50]ದೀನಜನಕ್ಕೆಸನ್ತೊಸಂಬಡೆಕುಡುತಿರ್ಪ್ಪಪೆಂಪಿನಳವಚ್ಚರಿಯಾಯ್ತುಭಿಮಾನದಾನಿ
[51]ಯೊಳ್ ॥ ಸ್ವಸ್ತಿಶ್ರೀಮನ್ಮಹಾಮಣ್ಡಳೇಸ್ವರಂತ್ರಿಭೂವನಮಲ್ಲ
[52]ತಳೆಕಾಡುಗೊಣ್ಡಭುಜಬಳವೀರಗಂಗಹೊಯ್ಸಳದೇವರುಸುಖ
[53]ಸಂಕಥಾವಿನೋದದಿಂರಾಜ್ಯಂಗೆಯುತ್ತಮಿರೆತತ್ಪಾದಪದ್ಮೋಪಜೀವಿಮ

[54]ಹಾಸಾಮನ್ತಾಧಿಪತಿಶ್ರೀಮನ್ಮಹಾಪ್ರಧಾನದ್ರೋಹಘರಟ್ಟಪಿರಿಯದ
[55]ಣ್ಡನಾಯಕಗಂಗರಾಜತಳೆಕಾಡಂಕೊಳುವಲ್ಲಿಮುಂಗೊಳಬೇಡಿಕೊಂಡುಗೆಲ್ದ
[56]ಡೆಮೆಚ್ಚಿದೆಂಬೇಡಿಕೊಳ್ಕೆನೆಶ್ರೀಬಿಂಡಿಗನವಿಲೆಯತೀರ್ತ್ಥರ್ಕ್ಕರಳವಿತ್ತಿಯಂ
[57]ಬೇಡೆಶ್ರೀವಿಷ್ಣುವರ್ದ್ಧನಹೊಯ್ಸಳದೇವರುಕಾರುಣ್ಯಂಗೆಯ್ದುಕೊಡೆಕೊಣ್ಡು
[58]ಸಖವರಿಸ ೧೦೪೬ ವಿಳಂಬಿಸಂವತ್ಸರದಶ್ರೀಮೂಲಸಂಘದದೇಸಿಗಗಣ
[59]ದಪುಸ್ಥಕಗಚ್ಛದಕೊಂಡಕುಂದಾನ್ವಯದಸುಭಚಂದ್ರಸಿದ್ಧಾನ್ತದೇವರಕಾ
[60]ಲಂಕರ್ಚ್ಚಿಧಾರಾಪೂರ್ವ್ವಕಂಮಾಡಿಬಿಟ್ಟದತ್ತಿಪಿರಿಯಕೆಱೆಯತೂಬಿನಬ[ಡ]ಗಣ
[61]ಹಳದಿಂತೆಂಕಕ್ಕೌಂಗಿನತೋಂಟಬಳಗಾಗಿಬಿಟ್ಟಗದ್ದೆಸಲಿಗೆಮುವತ್ತುಅದೇಹ
[62]ಳಿಯಮುಂದಣಲಕ್ಕಸಮು . . . . . ಮ್ಮಗಟ್ಟಮುಂಪಂದೂರಕ್ಕಿಯಕೆ
[63]ಱೆಯುಪಕ್ಷೋಪಹಸಿ . . . . . ಬಸದಿಯಮುಡಣ
[64]ಕರಿಯಕಲ್ಲಿಮುಡಲು . . . . . ಗಿಬಸದಿಯಹಡವಣದೆ
[65]ಸೆವರ ॥ ಈಧರ್ಮ್ಮಮನಳಿದವಗಂಗೆಯತಡಿಯಹದಿನೆಂಟು
[66]ಸಾಸಿರಕವಿಲೆಕೊನ್ದದೋಸದಲುಹೋದ ॥

20

ಅದೇ ಗ್ರಾಮದ ಜೈನಬಸ್ತಿಯೊಳಗೆ ರಂಗಮಂಟಪದ ತೊಲೇಮೇಲೆ.

[1]ಸ್ವಸ್ತಿಶ್ರೀಯುತಮೂಲಶಂಘಮದುತಾಂಶಂಘಂಗಣಂದೇಸಿಯಂಪೊಸ್ಥಂಗಛಮದನ್ವಯಂಬೆಳೆಸಮಂತಾಂಕೊಂಡಕುಂದಾನ್ವಯಂ
[2]ಭೂಸ್ತುತ್ಯಂಹನಸೋಗೆದಿಬ್ಯಮುನಿಗಂಪಾದಾರ್ಚ್ಯನಕ್ಕಂಕಳಾಭ್ಯಸ್ತರ್ಗ್ಗಂನಿಜವಂಶಜರ್ಗ್ಗಮಿದುತಾಂಶ್ರೀಪಾರ್ಶ್ವದಾನ
ಸ್ಥಳಂ ॥
[3]ಧರೆತನ್ನಂಬಣ್ಣಿಸಲ್ಬಿಂಡಿಗನವಿಲೆಯೊಳಾನೇಮದಂಡೇಶದಿಕ್ಕುಂಜರನಯ್ಯಂಪೆತ್ತತಾಯ್ಮುದ್ದರಸಿವಿಮಳಗಂಗಾನ್ವಯಖ್ಯಾತೆಯಾ
ಗಲ್ದೊರೆವೆತ್ತೀಪಾರ್ಶ್ವದೇವ
[4]ಪ್ರಭುಕಲಿಯುಗಭೀಮಾರ್ಹಗೇಹಾದಿಜೀರ್ಣ್ಣೋದ್ಧರಣಂಗೆಯ್ದಾವಗಂಸೋಭಿಸೆಸೊಧೆವೆಸನಂಗೆಯ್ಸಿದಂಪುಣ್ಯಪುಂಜಂ ॥ ಸಲೆ
ದೇವಕ್ಷೇತ್ರದೊಳ್ಬಿಂಡಿಗನವಿಲೆ
[5]ಯೊಳಿರ್ಪ್ಪತ್ತುನಾಲ್ಕಂಡುಗಂನೀರ್ಣ್ಣಿಲನಂವಯ್ವತ್ತರಂಬೆದ್ದಲೆಯನತಿಬಳಂ ನೇಮಮಂತ್ರೀಶಪುತ್ರಂಕುಲಕಂತಾಂಪಾರ್ಶ್ವದೇ
ವಂಸಲೆಕಲಿಯುಗಭೀಮಾರ್ಹಸತ್ಪೂಜೆಗೊಲ್ದೀ
[6]ಯೆಲಸದ್ವಂಶ್ಯಂಗೆದಿಬ್ಯಬ್ರತಸಮಿತಿಗೆವಿದ್ಯಾರ್ತ್ತಿಗುತ್ಸಾಹದಿತ್ತಂ ॥ ಶಕವರ್ಷ ೧೦೮೯ ತ್ತೆನೆಯಸರ್ವ್ವಜಿತುಸಂವತ್ಸರದಮಾ
ಘಬ ೫ ಶುಕ್ರವಾರದಂದುಪಾರ್ಶ್ವದೇವಚತುರ್ವಿಧದಾನಕೆಬಿಟ್ಟದತ್ತಿ ॥

21

ಅದೇ ಬಸ್ತಿಯ ಮುಂದೆ ಇರುವ ಕಲ್ಲಿನಲ್ಲಿ.

ಪ್ರಮಾಣ 5′ × 1′ 3″.

[1]ಸ್ವಸ್ತಿಯಮನಿಯಮಸ್ವಾಧ್ಯಾಯ
[2]ಧ್ಯಾನಧಾರಣಮೌನಾನುಷ್ಠಾನಜ
[3]ಪಸಮಾಧಿಶೀಲಗುಣಸಂಪನ್ನರಪ್ಪಶ್ರೀ
[4]ಮೂಲಸಂಘದಕೊಂಡಕುಂದಾನ್ವಯ
[5]ದದೇಶಿಯಗಣದಪುಸ್ತಕಗಚ್ಛದ
[6]ಶ್ರೀಪ್ರಭಾಚಂದ್ರಸೈದ್ಧಾನ್ತಿಕರಶಿ
[7]ಷ್ಯಿತಿಯರಪ್ಪ . . . . . ಕಯರು
[8]ಕಮವ್ವೆ . . ರಪ್ಪಮುಜಕವೆಕನ್ತಿಯ
[9]ರ್ಗ್ಗೆತವ . . ನಿಸಿಧಿಯಂಮಾಡಿಸಿಸ
[10]ಗೈಕಸನ . . . . . ದು
[11]ಸ್ವರ್ಗಸ್ಥರಾ . . . . . .

22

ಅದೇ ಬಸ್ತಿಯ ಹೊರಪ್ರಾಕಾರದಲ್ಲಿ ನಟ್ಟ ನಿಷಧಿ ಕಲ್ಲಿನಲ್ಲಿ.

[1]ಶ್ರೀತಾರಣಸಂವಛರದ | [2]ಆಸಾಡಕು೦ಲು.. | [3]..ಕಬ..ಲ್ಲಿ ನಿಷಧಿ

23

ಅದೇ ಗ್ರಾಮಕ್ಕೆ ಪೂರ್ವ ಸಣ್ಣೀಗೌಡನ ಹೊಲದಲ್ಲಿ ನಟ್ಟ ವೀರಕಲ್ಲಿನಲ್ಲಿ.

[1]ಸಕವರ್ಷಂ ೪೯೯ಯಬಹುಧಾನ್ಯ....ರದ

[2]ಫಾಲ್ಗುಣಮಾಸದಪಞ್ಚಮಿ.....

[3]ಪ . ಪನವಿಲೆಯಪ್ಪತಿವರಮಳಿದಿಯನ.....

[4]ಬುನೆಜುಬೆಬೊಜುಕಾದಿದಂಕಡುಗಲಿಯಂಪೋಲ್ತುಗವಜು..ತಿಳಕಂ

[5]ಸಿಡಿಲವೊಲೆಲಗಿದಬೇಡರಾಪಡೆಗೊಗೆಯದೆಕಾಗಿಪೆಂಡಿರುದೆರಳರ

[6]ಕಡುಮುಳಿದುನೋಡಿದಾಗಂಮಡಿದುದಳಿಗವಜುಸಿಟ್ಟಗೇನೊಪ್ಪದದೋ

24

ಅದೇ ಗ್ರಾಮಕ್ಕೆ ಪೂರ್ವ ಅದ್ದಳ್ಳಿ ಕಂಬದಹಳ್ಳಿಯ ಎಲ್ಲೆಯಲ್ಲಿ ನಟ್ಟ ಕಂಭದಲ್ಲಿ.

ಪ್ರಮಾಣ 3′ × 1′.

ಪಶ್ಚಿಮಮುಖ.

[1]....ನ.

[2].....ಕವರಿಪ

.....

[5].....ಅಜಾ .

[6]..ರದೊಳೇಕವೀರಭಟಾ

[7]ರರಗುಣ್ಣಂಪ್ರರುಷೋತ್ತಮ

[8]ಯ್ಯನಮಗ ॥ ನೆನೆ

[9]ಯುತ್ತುಂಜಿನೇಚ್ಛರಣ

ದಕ್ಷಿಣಮುಖ.

[10]. ನು . ಯ.

[11]....ನೊದ್ರ.

[12].....

[13]..ತ..

[14]. ಱ...ಜನದ

[15].....ಪಡೆದ

[16]ನುತ್ತಮಗತಿಯಂ

25

ಅದೇ ಹೋಬಳಿ ಹೊನ್ನಾವರ ಗ್ರಾಮದ ಲಕ್ಷ್ಮೀನಾರಾಯಣ ದೇವಸ್ಥಾನದ ಗರ್ಭಗುಡಿಯ ಬಾಗಿಲ ಒಲಗಡೆ.

[1]ಶ್ರೀತೊಗಟರಬಿಕೊಡೆಯುವೈಯು | [2]ಕೆಂಪೈಯನಮಗಕಾಚೈಯು | [3]ಸಹಶ್ರೀಚಿ..ಪವರಸೇವಾರ್ಥ

26

ಅದೇ ದೇವಸ್ಥಾನದ ಮುಂದೆ ನಟ್ಟ ಕಲ್ಲಿನಲ್ಲಿ.

ಪ್ರಮಾಣ 3′ 6″ × 1′ 6″.

[1]ಸ್ವಸ್ತಿಶ್ರೀಜಯಬುದಯಸಲಿವಾಹನನ..

[2]ರ್ಷ೦೫೪೫೫ ಸಂದುವರ್ತಮಾನಕೆಸಲುವರುಧಿರೋದ್ಗಾರಿ

[3]ಸಂವತ್ಸರದವಾರ್ಗಶಿರಶು ೦ಲೂಸದನಿವರಾ

[4]ಯರುಮರಾಜಾವೊಡೆಯರುಸುಖರಾಜ್ಯಂ

[5]ಗೈವಗಜಗದೇಕಾರಾಯವೊಡೆಯರಕಾರ್ಯ

[6]ಕೆಕರ್ತರಾದಲಲುವುಲುಕವೊಡೆಯರಿಗೆ

[7]ಅನೇಕಯೊಸ್ಸಯುಪದವಿಯಗಜೇಕೆಂದು

[8]ತಂವೋಜಿಪಂಡಿತರುಶ್ರೀಲಕ್ಷ್ಮೀಕೇಶ್ವದೇವ

[9]ರಿಗೆನಂದದೀಪಯಿ:ಲ್ಲದಿರಲಾಗಿ

[10]ಮಾದಿಹ್ಯೆಯಿರುಕ್..ಗ

27

ಅದೇ ದೇವಸ್ಥಾನದ ಮುಂದೆ ಗರುಡ ಕಂಭದಲ್ಲಿ.

[1]ಕಲಿಯುಗ[illegible]ವರು
[2]ಷದವಯಿಶಾಖಬ ಒಬು
[3]ವೊನಲಲಿಂಗಪಯನಾಯ
[4]ಕರವುಗತಿಂವುನಾಯ
[5]ಕರದವ್ಮರ್ವಾಗಿಱವರಸೇನ
[6]ಬೋಪಚಕಿನರನರೂವಾಡಿ
[7]ದದೀಪವಾಲಿಕಂಭಶ್ರೀ

28

ಅದೇ ಹೋಬಳಿ ಲಾಲನಕೆರೆ ಗ್ರಾಮದ ಈಶ್ವರದೇವಸ್ಥಾನದೊಳಗೆ ಬಿದ್ದಿರುವ ಕಲ್ಲಿನಲ್ಲಿ.

ಪ್ರಮಾಣ 4′ 6″ × 2′ 6″.

[1]ಶ್ರೀವುಹಾದೇವಾಯನವುಃ ॥ ನವುಸ್ತುಂಗಸಿರಕ್ಚುಂಬಿಚಂದ್ರಚಾವುರಚಾರವೇ ತ್ರೈಳೋಕ್ಯನಗರಾರಂಭವೂ
[2]ಲಸ್ತಂಭಾಯುಸಂಭವೇ ॥ ಪತ್ತಿರೆಗಂಗೆಯುಹನಿಗಳುವುತ್ತಿನಬಾಸಿಗವಿದೆನಿಸಿವಾಸುಗಿಸುಖದಿಂನುತ್ತಿದ್ದರ್
[3]ಜಾಟದಾದೇವ್ರೋತ್ತವುನವುಗೊಸದುಕೊಡುಗೆಸುಕಸಂಪದವುಂ ॥ ಆದಿತ್ಯರೆನಿಬರಾದೊಡೆವೇದಿನಿಯೊಳಗಿವನ
[4]ತೇಜವಧಿಕವೆನುತ್ತಂಕಾದಲುವೈರಿಗಳಂವುದಯೂದವಕುಳತಿಳಕವೀರವಿನೆಯಾದಿತ್ಯ್ರಂ ॥ ಕೆಳಿಗಂಗೆಯೊಳವುಳತೆಯಿಂಕೆಳೆ
ಸೊಬಗಿಂಗಿರಿ
[5]ಜೆಯೊಡನೆಸಿರಿಯೊಡನೆಂದುಂಕೆಳೆನಿಜಪತಿಯಭಿವ್ರಿದ್ಧಿಗೆಕೆಳೆಯಬ್ಬೆಗೆನಾವುವಾದುದಿಂತಂನ್ವತ್ತರ್ಂ ॥ ಪಜಪಜಿಸಿವುಳಿದುಕಾ
[6]ಯ್ವಿಂದುಜದೆತ್ತಿದವೀರವೈರಿವಗ್ಗರ್ದಬಾಯಿಹೊಂನೊಜೆಧಾಗಿಕಟ್ಟುದಲಗಂಕಿಜಿಪನೆರಣವುಖದೊಳದಟಿನಿಂದೆಜೆಯಂಗಂ ॥
[7]ವೀರುಗೆವೀಖಳೆಬಹುಖಳೆವಾಧಿರುಹಭವಂಗೆಪೂನ್ನರ್ಖಳೆಚಂದ್ರಂಗಾಧೀರಂಗೇಚಲದೇವಿಗಭೀರಂಗೆಜೆಯಂಗನ್ರಿಪತಿ
[8]ಗೊಪ್ಪಂಬಡೆಗುಂ ॥ ಉಭಯಕುಳಸುಧ್ಧಿಯೆನಿಪಾಸುಭಲಕ್ಷಣೆಗಂಸುಚರಿತಭರಿತನೆನಿಪ್ಪಾಪ್ರಭುಗಂವೂವರ್ತ್ತನೆಯಸ್ಸ್ರಬ
ಗರ್ಬ್ಬ
[9]ಲ್ಲಾಳವಿಷ್ಣು ಪ್ರುದೆಯಾದಿತ್ಯರು ॥ ಜೇರವುವೈರವುಂಬಿಸುಜುಪಾಂಡ್ಯಕಡಂಗದಿರೆಂದ್ರರೆಂದ್ರವುಂಪೂರದಿರೊಡ್ಡಗೊಡ್ಡವುನದ
[10]ಂಬಿಡುವೂಳವಕಾಳಿಗಕೆವೈದೋರದಸಾರೆಲೇತಿಗುಳನೀಂಜಗುಳಿಂಬುದಪೂರವೀರದೋರ್ವ್ವಾರಗಭೀರಧೀರತೆವಿನಿಸ್ರುತಪ್ರೂಪನೆ
[11]ಬಲ್ಲುಭೂಪನಂ ॥ ಎತ್ತದವುುಂನವೆತ್ತಿನಡೆಗೊಳ್ಳದವುುಂನವಡುತ್ತುರ್ಕೋಪದಿಂವುುತ್ತದವುುಂನವತ್ತರ್ವುನೆತ್ತೆತ್ತಿದವಿತ್ತಿರಿ
ವಾತ್ಮದುಗ್ಗರ್
[12]ವುುಂವುತ್ತಿನವೇಡನಿಗ್ಗರ್ವುವಿದೆಂದು ವಿರೋಧಿಗೆವೀರಲಕ್ಷ್ಮಿಸಾಜುತ್ತಿರೆ ವಿಷ್ಣುವಿಕ್ರವುದುಪಕ್ರವುವಾಕ್ರವಿಸಿತ್ತು ಲೋಕ
ವುಂ ॥ ಧುರದೊ
[13]ಳುಬಂದೊಡ್ಡಿವೈರಿಪ್ರಕರವಿರಲವಪ್ಪುಂಭದಿಂಬಿಟ್ಟದೇವಂಕರವಾಳಂತೋಡಿಕೊಂಡಿಂಬಳಿಕವೆಲೆವುಹಾದೇವಕಾಳಾಗ್ನಿರು
[14]ದ್ರಂಗುರಿಗಣ್ಬಿಂದಂತೆವಾಕಾಳಿಗೆಗರವಡರ್ದಂತಿಂದ್ರದಿಗುದಂತಿವುುಳ್ಸಿಂಪರಿಘಿಂಗೊಂಡಂತಗುಬ್ಬುಳುಬ್ಬರ್ಪುದೆನೆ
[15]ವುುಳ್ಸಿಂವಿಾಖವಿವಾಜಿಖಂಪನಾವಂ ॥ ಕೊಂಡೆಂತಳಕಾಡಂಕೈಕೊಂಡಂವೇಲೆತ್ತಿಕೊಂಗನವೆಯವದಿಂದಂಕೊಂಡಂವಿಷ್ಣುವೆ
ಚೋ
[16]ಳನವುಂಡಳಿಕರವುುಡೆಗೊಂಡುತನುವುಂಡಳವುಂ ॥ ತುಳುದೇವಪಂಚಕ್ಕಗೊಟ್ಟಂತಳವನಪುರಉಚ್ಚಂಗಿಕೋಳಾಲವೇಳುಂವುಲೆ
ಕಂಚೀಕೊಂಗ
[17]ಬ್ಬಿಸುವಹಡಿಯಘಟ್ಟಂಬಯಲುನಾಡುನೀಳಾಚಳೆದುಗ್ಗರ್ಂರಾಯಶಾಯೋತ್ತವುಪುರಿತೆರೆಯೂಕೊರ್ತ್ತೀಯತೂರುಗೊಂದವಾಡಿ
ಸ್ತ
[18]ಳವುಂಭೂಭಂಗದಿಂಕೊಂಡತುಳಭುಜಬಳಾಟೋಪನೀವಿಷ್ಣು ಭೂಪಂ ॥ ಸ್ವಸ್ತಿ ಸವುಧಿಗತಪಂಚವುಹಾಸಬುದವುಹಾವುಂ
[19]ಡಳೀಶ್ವರಂದ್ವಾರಾವತೀಪುರವರಾಧೀಶ್ವರಂತುಳುವಬಳಜಳಧಿಬಡವಾನಳಂದಾಯಾದದಾವಾನಳಂಪಾಂಡ್ಯಕುಳಕಮಳವನವೇಧ
[20]ಂಡಗಂಡಭೀರುಂಡವುಂಡಳಿಕಬೇಂಟೆಕಾಱಪರವುಂಡಳಸೂಱೆಕಾಱಸಂಗ್ರಾವುಭೀವುಕಲಿಕಾಲಕಾವುನಕಳಿವಂದಿ

21ಬ್ರಿಂದಸಂತರ್ಪ್ಪಣಸಮತ್ತ್ರವಿತರಣವಿನೋದವಾಸಂತಿಕಾದೇವೀಲಬುಧವರಪ್ಪ್ರಸಾದಮ್ರಿಗಮದಾಮೋದನಾಮಾದಿಪ್ರಸಸ್ತಿಸ
22ಹಿತಂಶ್ರೀಮನುಮಹಾಮಂಡಳೇಶ್ವರಂತಳಕಾಡುಕೊಂಗುನಂಗಲಿಗಂಗವಾಡಿನೊಳಂಬವಾಡಿಬನವಸೆಹಾನುಂಗಲುಉಚ್ಚಂ
23ಗಿಗೊಂಡಭುಜಬಳವೀರಗಂಗವಿಷ್ಣುವರ್ದ್ಧನದೇವರುಸಕಳಮಹೀಮಂಡಳಮಂದುಷ್ಟನಿಗ್ಗ್ರಹಸಿಷ್ಟಪ್ರತಿಪಾಳನಂಗೆ
24ಯ್ದುರಕ್ಷಿಸುತ್ತುಂದೋರಸಮುದ್ರದನೆಲೆವೀಡಿನೊಳುಸುಕಸಂಕಥಾವಿನೋದದಿಂರಾಜ್ಯಂಗೆಯ್ವುತ್ತಮಿರೆತದೀಯಪಾದಪದ್ಮೋ
25ಪಜೀವಿ ॥ ಎನೆನೆಗಳವಿಷ್ಣುಭೂಪನಸನುಮಂತ್ರಿಗಳೆನಿಸಿನೆಗಳ್ದರೊಳುಕರಮೆಸೆದಂ ಮನುಮಾರ್ಗ್ಗನಧಿಕತೇಜಂಸನುಮುದದಿಂ
ದೇಚಿರಾಜ
26ದಂಡಾಧೀಶಂ ॥ ಅಂಡಲೆದರಿನರಪಾಳರಹಿಂಡಂಬೆಂಕೊಂಡುಕೊಂಡುಪರಮಂಡಳಮಂದಂಡೇಷನೇಚಿರಾಜಂಗಂಡರಗಂಡ
27ಂಧರಿತ್ರಿಯೊಳುಪೆಸರ್ವ್ವಡೆದಂ ॥ ಏದೊರೆವೈರಿಮಂಡಳಿಕಮಂಡನಮಂಪತಿಗಾತ್ಮಭಕ್ತಿಯಿಂಸಾದಿಸಿಮಿಱದಂತುಚರಣಾನತರಾಗಿ
28ಪಬಲುಪುವಿಷ್ಣುಗಂದಾದಖಗೇಂದ್ರನೀಗಳಿವನೆಂಬಿನೆಗಂದೊರೆವೆತ್ತಪೆರ್ಮ್ಮೆಯಿಂಬಾದುದೆನುತ್ತಬಂಣಿಪುದುಧಾರಿಣಿಯೇಚಣದಂ
ಡನಾ
29ಥನಂ ॥ ಬಾರಿಸೆದಂಡೆಯಂಕೊರಲಕೊಂಕಳವಟ್ಟರೆಕಾಲವೇಗವೀಧಾರಿಣಿಯೊಳುಪೆಡಂಗನೊಳಕೊಂಡಿರಲೇಱಿತುರಂಗರಾಜನ
30ಂವೀರಮುಮಂವಿಳಾಸಮುಮನೀತನೆತಾಳ್ದಿದನೆಂದುನೋಡಿಕೈವಾರದಿನೆಲ್ಲರುಂಹೊಗಳೆತಂನನೆಯೇಚಣಮಂತ್ರಿರಂಜಿಪಂ ॥
31ಮನುಮಾರ್ಗ್ಗನೇಚಿರಾಜನವನಿತೆಜಗದುವಿನುತೆಪುಂಣ್ಯವತಿಗುಣವತಿ ಯೆಂದನುದಿನಧರಿತ್ರಿಬಂಣಿಪುದೆನೆಪಡಿಯಾರ್ಕಾಮಿಯಕ್ಕ
ನು
32ರೆಗಂದೊರೆಗಂ ॥ ಸುರಕುಜದಸಾಖೆಗಳುತಾವೆರಡಾಗೆದವೆನಲುಕೆವಿಷ್ಣುವುಂಬೋಕಣನುಂವರಗುಣಿಗಳುಪೆಸರ್ವಡೆದರುಧರೆಗ
ನುಪ
33ಮವೆನಿಸಿಕಾಮಿಯಕ್ಕನಬಸುಱೊಳು ॥ ನುಡಿದನುಡಿತಾಂಬ್ರಸಾಶನಪಡೆದಧನಂಸದುಬುಧರ್ಗ್ಗ ಮಾತ್ಯರೊಳಧಿಕಂಪೊಡವಿ
ಯೊಳೆತೋ
34ರ್ಪ್ಪಸುರತರುಪಡೆಮಾತೇಂಬಿಟ್ಟದೇವದಂಡಾಧೀಶಂ ॥ ಬೀರಂಬಿಂಕಮದೇವುದೊಹಾರುವನಿನಗೆಂದುನುಡಿವಗಳಹನಬಾಯೊಳು
35ಕೂರಲಗನೆಯ್ದೆಕುತ್ತುವವೀರಾಗ್ರಣಿಮಂತ್ರಿಬೋಕಣಂವಸುಮತಿಯೊಳು ॥ ವರಗುಣಿಮಹದೇವಂಣಂಪರಮಗುಣಾಂಬುಧಿ
36ಯೆನಿಪ್ಪಹರಿಹರದೇವಂಕರೆದೀವದಾನಿಯಿಾಚಣವರಮಂತ್ರೋತ್ಸಾಹರೇಚಿರಾಜನಮಕ್ಕಳು ॥ ವರಮಣಿಮುದ್ರಿಕಾಪ್ರತಿಮಮ
37ಪ್ಪಿನೆಗಂತನಗಾವುಗಂವಸುಂಧರೆಯನೆಕೈಗೆಮಾಡಿಬೆಸಕೆಯ್ಸೆನೆಗಳ್ತಿಯವೀರಮಂಡಳೇಶ್ವರರನದಕ್ಕೆಮೆಚ್ಚುಗುಡೆವಿಷ್ಣುಮಹೀ
38ಪತಿಯೂರನರ್ಕ್ಕಱಿಂಧರೆಸಸಿಸೂರ್ಯ್ಯರುಳ್ಳಿನೆಗವುಂಬಳಿಯಂಸಲುವಂತುಲೀಲೆಯಿಂ ॥ ಸ್ವಸ್ತಿಸಮಸ್ತವಸ್ತುಗುಣಸಂಪ
39ಂನನುಂಅರಿಬಿರುದದಂಡನಾಥಮತ್ತಮಾತಂಗಸಿಂಗನುಂಹೊಯ್ಸಣರಾಜ್ಯಸಮುದ್ಧರಣನುಂವಿಪ್ರಕುಳತಿಳಕನುಂಚಾತುರ್ಯ್ಯ
ಚತು
40ರಾನನನುಂಶ್ರೀಮನುಮಹಾಪ್ರಧಾನಂದ್ರೋಹಘರಟ್ಟನಪ್ಪೇಚಣದಂಡನಾಯಕರುಹೊಯ್ಸಣಬಿಟ್ಟದೇವನಂಮೆಚ್ಚಿಸಿಸ
41ಕವರಿಷ ೧೦೫೯ನೆಯಪಿಂಗಳಸಂವತ್ಸರದಫಾಲ್ಗುಣಸುದ್ಧತ್ರಯೋದಸಿವಡ್ಡವಾರದಂದುನಾನಲಕೆಱೆಯಗೌಂಡಿಕೆ
42ಯಉಂಬಳಿಯಂಹಡೆದಗದ್ದೆಯಸ್ತಳಕೊತನಕೆಱೆಯಕೆಳಗೆಸಲಗೆ ೩ ಮತ್ತಿಯಕೆಱೆಯಕೆಳಗೆಅಡಕೆಯಮರದ
43ತೋಂಟದಸ್ತಳಮರ ೧೦೦೦ ಊರಮುಂದಣಬೆದ್ದಲೆಸಲಗೆ ೧ ಮತ್ತವೀಗ್ರಾಮದಸೀಮಾಸಂಬಂಧವೆಂತೆಂದಡೆಮೂಡಲುಮೆಳೆ
ಯುಹಳ್ಳಿ
44ಯೆಡೆಯಹುಣಿಸೆಅಲ್ಲಿಂಬರಲುಸುಂಣಹರಳುಅಲ್ಲಿಂಬರಲುಹಳ್ಳಆಗ್ನೇಯದಲುದಾವಂಣನಕೆಱೆಯತೆಂಕಣಕೋಡಿ
45ಅಲ್ಲಿಂಬರಲುಬೀಚೆಯನಕೆಱೆಯತೆಂಕಣಕೋಡಿಅಲ್ಲಿಂಬರಲುದೇವರಕೆಱೆಯಬಡಗಣಕೋಡಿಅಲ್ಲಿಂಬರಲುಕಲ್ಲತ್ತಿಯ
46ಕಗ್ಗಲ್ಲಪೊರಡಿಅಲ್ಲಿಂಬರಲುನೈರಿತ್ಯದಲುಅರುಹನಕಲ್ಲಅಡ್ಡವಟ್ಟೆಯಾಲದಮರ ಅಲ್ಲಿಂಬರಲುಚುಜ್ಜಿಲಮರಅಲ್ಲಿಂಬರಲುನಟ್ಟ
ಹಾಸಱೆ
47ಗಲುಅಲ್ಲಿಂಬರಲುಚಂಚರಿವಳ್ಳದಹಡುವಣಹುಣಿಸೆಅಲ್ಲಿಂಬರಲುಹೊಂನರಳಿಅಲ್ಲಿಂಬರಲುಕಗ್ಗಲ್ಲಮೊರಡಿಅಲ್ಲಿಂಬರಲು
48ಬಡಗಮುಂದಾಗಿಹರಿದಹಳ್ಳದತಕ್ಕರಹುಣಿಸೆಅಲ್ಲಿಂಬರಲುವಾಯಾಬ್ಯಕ್ಕೆಕಗ್ಗಲ್ಲಮೊರಡಿಅಲ್ಲಿಂಬರಲುಕಲ್ಲದೊಣೆಅಲ್ಲಿಂಬರಲು
49ಆಲದಮರಅಲ್ಲಿಂಬರಲುಹೂಲಿಯಕೊಳದಬಡಗಣೊಬ್ಬೆಯಿಾಸಾಂನ್ಯಕ್ಕೆನಂದಿಯಕಲ್ಲುಮತ್ತಂದೇವದಾನವಾಗಿಮೂಲಸ್ತಾನದ

50ಮಲ್ಲಿಕಾರ್ಜ್ಜುನದೇವರಅಂಗಭೋಗರಂಗಭೋಗನೈವೇದ್ಯನಂದಾದೀವಿಗೆಖಂಡಱ್ಪುಟಿತಜೇನೋಧ್ಧಾರಕವಾಗಿಕೇತಜೇಯಜಕ್ಕ
ಜೇಯ

51ನಕಾಲಂಕರ್ಚ್ಚಿಧಾರಾಪೂರ್ವ್ವಕಂಮಾಡಿಬಿಟ್ಟದತ್ತಿಹಿರಿಯಕೆಱೆಯಕೆಳಗೆಗರ್ದ್ದೆಸಲಗೆಮೂಱುಬೆದ್ದಲೆದೇವರಮುಂದೆಕೊಳ

52ಗಂಹತ್ತುಕಬ್ಬಿನಕೆಱೆಯಕೋಡಿಯಲುಕೊಳಗಂಹತ್ತೆಇಂತೀಧರ್ಮ್ಮಮಂಪ್ರತಿಪಾಳ್ಸಿದವರುಗಂಗೆವಾರಣಾಸಿಕುರು

53ಕ್ಷೇತ್ರದೊಳುಸಹಸ್ರಕವಿಲೆಯಕೋಡುಂಕೊಳಗುಮಂಹೊಂನಲುಕಟ್ಟಿಸಿಸಹಸ್ರಬ್ರಾಹ್ಮಣರಿಗೆಕೊಟ್ಟಫಲಮಕ್ಕು ಇಂ

54ತೀಧರ್ಮ್ಮಮಂಕೆಡಿಸಿದವಂಗಂಗೆವಾರಣಾಸಿಯೊಳುಸಹಸ್ರಕವಿಲೆಯುಂಸಹಸ್ರಬ್ರಾಹ್ಮಣರುಮನಳಿದನರಕ

55ಕ್ಕಳಿವರು ॥ ಸ್ವದತ್ತಂಪರದತ್ತಂವಾಯೋಹರೇತಿವಸುಂಧರಸಷ್ಟಿರ್ವರುಶಸಹಸ್ರಾಣಾಂವಿಷ್ಠಾಯಾಂಜಾಯತೇಕ್ರಿಮಿ ॥

56ಕ್ಷಿತಿವಿನುತೆಸರ್ಬ್ಬದೇವನುತೆಸಂನುತೆಸೋಮಿಯಕ್ಕನಣುಗಿನಪುತ್ರಂಸತುಕವಿಸಾಂತಮಹಂತಂಸ್ತಿತಿಸಾರಂಪೇಳ್ದನಱ್ತಿಯಿಂ

57ಸಾಶನಮಂ ॥

58 * ಚಾಮಗೌಂಡರಮಗಮೂಲಿಗಮುದ್ದೆಯಂಗೆಹೊಲವೆರೆಗೆನಡೆದಲ್ಲಿಗೆಯ್ದುಂಬಳಿಯಾಗಿಸಲಿಸಿದಗ

59ದ್ದೆಹಿರ್ಯ್ಯಕೆಱೆಯಕೆಳಗೆಮುತ್ತಿರಿಯಲ್ಲಿಸಲಗೆ ಂಪದ್ದಲೆಹಿತ್ತಿಲಕೆಯಿಗೊರಕೆಱೆಯಲುವಾ

29

ಅದೇ ದೇವಸ್ಥಾನದ ಮಹಾದ್ವಾರದ ಬಲಗಡೆ ಗೋಡೆಯ ಮೇಲೆ.

ಪ್ರಮಾಣ 7′ × 3″.

1ಶ್ರೀಮನ್ಮಹೇಶ್ವರಮಹೀಸ್ವರಚಾರುಹಸ್ತಂಸೋಮಾರ್ದ್ಧಸೇಖರಮನೇಕಮುನೀಂದ್ರವಂದ್ಯಂಕಾಮ

2ಪ್ರಭಂಜನ(ಂ)ಮನ[ಂ]ಜನನಿತ್ಯರೂಪಂಶ್ರೀಮಲ್ಲಿಕಾರ್ಜ್ಜನಮುಮಾರಮಣಂನಮಾಮಿ ॥

3ನಮಸ್ತುಂಗಶಿರಶುಂಭಿಃಶ್ಚಂದ್ರಚಾಮರಚಾರವೇ ತ್ರೈಳೋಕ್ಯಂನಗರಾರಂಭಮೂಳಸ್ತಂಭಾ

4ಯಶಂಭವೇ ॥ ಸರಸಿರುಹಭವನಚೇತೋಸರಸಿರುಹದಿನತ್ರಿಯತ್ರಿನೇತ್ರದೊಳೆಸುಧಾಕರನಿಂದುವಿಂದೆಯದುಯದುಧ(ರ)

5ರಣೀಶ್ವರವಂಶದಿಂದೆಯಾದವರಾದರ್ ॥ ಆಯದುವಂಶದೊಳೊಗೆದನಜೇಯಂಜಿನಧರ್ಮ್ಮನಿಂರ್ಮ್ಮಳಂಶಶಕಪುರಕ್ಕಾಯುಷ್ಯದಂ
ತೆಜಿನಮುನಿ

6ನಾಯಕಪದಭಕ್ತಿಕುಶಳನತಿಶಯದಶಳಂ ॥ ವೃ ॥ ಶಳನೆಂಬಕ್ಷಿತಿಪಾಳಕಂಗೆವಿನಯಾದಿತ್ಯಂತದಾಪತ್ಯನುಜ್ಜಳಕೀರ್ತ್ತಿಪತಿ

7ಭೂವರೇಣ್ಯನೆಱೆಯಂಗಂಗಾತನಾತ್ಮೋದ್ಭವಂಬಳವದ್ವಿಷ್ಣುನೃಪಾಳನಾತನತನೂಜಂನಾರಸಿಂಹಂಗೆನಿಶ್ಚಳಧೈರ್ಯ್ಯಂಯದು

8ವಂಶಮೇರುವೊಗೆದಂಬಲ್ಲಾಳಭೂಪಾಳಕಂ ॥ ಕುಲದೊಂದುಂನತಿರೂಪಿನೊಂದತಿಶಯಂಸೌಭಾಗ್ಯದೊಂದುಭವಂಸಲೆಸಂ

9ಪತ್ತಿಯೊಳೊಂದಿದೊಂದಧಿಕಪುಣ್ಯಂಧಾತ್ರಿಯಂತಂನತೋಳ್ವಲದಿಂದಾಳ್ವಸುಪುತ್ರನಂಪಡೆದಸೈಪೇನುಂಟೊಪೇಳ್ವಂದುಪದುಮಲ
ಮಾ

10ದೇವಿಯೊಳಲ್ಲದೀಯದುನೃಪಾಳಪ್ರೇಯಸೀವರ್ಗ್ಗದೊಳ್॥ ಘನಕೂರ್ಮ್ಮೋತುಪ್ರಿಷ್ಠಪಾಂಶುಪ್ರಚಯಶಯನದಿಂದೆರ್ದುಸೇಷ್ಷಸ್ಥ

11ಟಾಕಾನನದೊಳ್ತಾನಾಡಿದಿಕ್ಕುಂಜರನಿಬಿಡದ್ರಿಢಸ್ಕಂಧಮಂನೆರ್ಮ್ಮಿಗೋತ್ರಾವನಿಭ್ರಿತ್ಕುಂಜಂಗಳೊಳ್ಸಂಚರಿಸಿಪದುಳವಿರ್ದ್ದ
ಪ್ಪುದುದ್ದಾಮದೊಳ್ಕುಂಭಿ

12ನಿಯಿಾಗಳ್ವೀರಬಲ್ಲಾಳನವಿಜಯಭುಜಾಳಾನದೊಳ್ಲೀಲೆಯಿಂದಂ ॥ ಗಣನಾತೀತಪ್ರತಾಪಪ್ರಕಟನಪಟುವೀವೀರಬಲ್ಲಾಳನಾ
ಥಂರಣದೊಳ್ತಂನುಗ್ರಖಳ್ಗೋರಗ

13ಹತಿಗೆರೆಯಂಮಾಡನಾರಂಮಣಿದುದುವೃತ್ತಾರಿಭೂಪಾಳರನಡಿದಳಿರೊಳ್ಮೊಳ್ಗುವನ್ತಾಗೆಮಾಡನ್।ಮರುದೇಶಾಧಿಪನುಟ್ಟಬೀಳು

14ಡೆಗೆಚೋಳಂಹಂತಿಗೂಳಿಂಗೆಹಂಮಿರನಂಕೂಡಲುನಿಂನೆಕಂಡಮಗಧೋರ್ವ್ವೀನಾಥನುಂನಂಮಗೂರ್ಜ್ಜರನುಂದೇವರಬಾಯತಂ
ಬುಲಕೆಕಾ

15ದಲುಕಟ್ಟಿಬಂದಿರ್ದ್ದರೆಂಬರಸಂಕಂಗಳಸಂಭ್ರಮಂಸಭೆಯೊಳೀಬಲ್ಲಾಳಭೂಪಾಳನಾ ॥ ಆರಾಜಾಗ್ರಣಿಯಾದವೇಂದ್ರತಿಳಕಂ
ಬಲ್ಲಾಳದೇ

16ವಂಗೆಗಂಭೀರಶ್ರೀಯೆನೆಸಂದಪದ್ಮಲಮಹಾದೇವೀನಿಜಾತ್ಮೋದರಕ್ಷೀರಾಂಭೋನಿಧಿಯೊಳ್ಸಮುದ್ಭವಿಸಿದಂವೀರಂನೃಸಿಂಹಂಬುಧಾ
ಧಾರಂಚೋಳ

* 58 ಮತ್ತು 59 ಈ 2 ಪಜ್ತಿಗಳು 54-55 ಪಜ್ತಿಗಳ ನಡುವೆ ಬರೆಯಲ್ಪಟ್ಟಿವೆ.

[17]ಕುಳ್ಳೈಕರಕ್ಷಮಗಧೋರ್ವ್ವೀಪಾಳನಿರ್ಮ್ಮಳಕಂ ॥ ಸ್ವಸ್ತಿಸಮಸ್ತಭುವನಾಶ್ರಯಂಶ್ರೀಪ್ರಿಥ್ವೀವಲ್ಲಭಂಮಹಾರಾಜಾಧಿರಾಜಂ
ಪರಮೇಶ್ವರಂ

[18]ಪರಮಭಟ್ಟರಕಂದ್ವಾರಾವತೀಪುರವರಾಧೀಶ್ವರಂಯಾದವಕುಳಾಂಬರದ್ಯುಮಣಿಸರ್ವ್ವಜ್ಞಚೂಡಾಮಣಿಮಲೆರಾಜರಾಜಂಮಲೆ
ಪರೊಳ್

[19]ಗಂಡಕದನಪ್ರಚಂಡಗಂಡಭೇರುಂಡಅಸಹಾಯಶೂರಸನಿವಾರಸಿದ್ಧಿಗಿರಿದುರ್ಗ್ಗಮಲ್ಲಮಗರರಾಜ್ಯದಿಶಾಪಟ್ಟಆದಿಯಮ

[20]ಘರಟ್ಟಚೋಳರಾಜ್ಯಪ್ರತಿಷ್ಠಾಚಾರ್ಯ್ಯಂಮೇರುನಗಧೈರ್ಯ್ಯಂಮಂಡಳಿಕಬೇಂಟೆಕಾಱಂಪಾಂಡ್ಯಗಜಕೇಸರಿಸೇವುಣಬಳಜಳಧಿ
ಬಡವಾನಳಂ

[21]ಶ್ರೀಮತ್ಪ್ರತಾಪಚಕ್ರವರ್ತ್ತಿವೀರಬಲ್ಲಾಳಪದಸರೋಜಿನೀಕಳಹಂಸನುಂರಾಧೇಯಕುಲಧವಳಹರ್ಮ್ಮ್ಯಮಾಣಿಕ್ಯದೀಪಾಂಕು
ರನುಂ

[22]ಸಂಭೂರಾಯಗಂಭೀರರತ್ನಾಕರಪೂರ್ಣ್ಣಸುಧಾಕರನುಂಪುಂಣ್ಯಾಂಗನಾನಿಕರನಂದನನುಂಧರ್ಮ್ಮಧ್ವಜವಿರಾಜಮಾನಕಲಿಯುಗ
ಧರ್ಮ್ಮನಂದನನುಂ

[23]ಶ್ರೀಮಲ್ಲಿಕಾರ್ಜ್ಜುನಪದನಖಮಯೂಖಸಾಂದ್ರಚಂದ್ರಿಕಾಚಕೋರನುಂಸುಕವಿಜನವಾಕ್ಪ್ರಸರಕವಿತಾಸುಖಪ್ರಮೋದೈಕಸಾ
ರನುಂಪ್ರತಾಪ

[24]ವೀರನರಸಿಂಹನಕಟ್ಟಿದಲಗುಕಾಳೆನಾಯಕನಗಂಧಹಸ್ತಿಯುಮೆನಿಪಮಲ್ಲೆನಾಯಕನಕುಲಕ್ರಮಾವತಾರವೆಂತೆಂದಡೆ ॥ ಕಲಿ

[25]ತನದಿಂದವಾಂತುಕಱಿಗಟ್ಟಿದಕೋಟೆಗೆಗೆಗ್ಗೆತಾನೆಮೆಯ್ಗಲಿತನದಿಂದಿದಿರ್ಚ್ಚುವರಿನಾಯಕಬೆಂನುರಿಯೆಂಣೆತಾನೆದೋರ್ಬ್ಬಲಮ
ನಡುತ್ತುಕಟ್ಟಿಕಳ

[26]ನೇಱುವವೈರಿಗೆಮಿತ್ತುತಾನೆಭೂತಳದೊಳಗೆಂದುಬಂಣಿಸುವರತ್ಯಮನಾಯಕನಂಜಗಜ್ಜನಂ॥ಕ॥ಅತ್ಯಮನಾಯಕನೊಳೆಸಾಹಿತ್ಯ

[27]ಗುಣಂಪುಟ್ಟುವಂದದಿಂಪುಟ್ಟಿದನೌಂನತ್ಯಂರಿಪುತಿಮಿರಕ್ಕಾದಿತ್ಯಪ್ರಭನೆನಿಸಿನಾಯಕಾಗ್ರಣಿಯಪ್ಪಂ ॥ ಅಪ್ಪಂಪರಕಾಮಿ

[28]ನಿಯರನಪ್ಪಂಬಂಟರ[ಬಾ]ವಂವಂದಿಸಿಸುಸಮಿತಿಗೆತಾನಪ್ಪಂಕುಲಮಂಪೊರವೆಡೆಗೆಬಲ್ಲಾಳನನುವರಂಗೆಲಲಪ್ಪಂ॥ಅಪ್ಪೆಯನಾಯಕ

[29]ನಿಷ್ಟಮನಪ್ರಿಯಮಾರವ್ವೆಗುಳಿದಕಾಂತೆಯರಂಪೋಲಿಪ್ಪುದೆವಿಲಾಸದೊಳುಕಂದರ್ಪ್ಪನಜಯಲಕ್ಷ್ಮಿಗೆಣೆಮಹೀಮಂಡ

[30]ಳದೊಳು ॥ ಆಮಾರಾಂಬೆಗೆಮೇರುಮಹಾಮನ್ದರದಿನ್ದವಮೃತಮಂಥನದಿಂದಂಸೋಮಂಪುಟ್ಟಿದನೆನಲುದ್ದಾಮಂಜನಿಸಿದನು

[31]ದಾತ್ತಶೀಳಂಕಾಳಂ ॥ ಸಿಡಿಲಪೊಡಪ್ಪುಸಿಂಗದವಿಗುರ್ವ್ವಣೆಕಾಳಿಗನಾಗನುರ್ಕ್ಕನಂಗಡಿಗಳಬೀದಿಯೊಳುಮೆಱೆವರಲ್ಲದೆನಾಯ

[32]ಕಕಾಳನಂದದಿಂತೊಡರ್ವ್ವವಿರೋಧಿನಾಯಕರರಕ್ತದೊಳಂಜಯಲಕ್ಷ್ಮಿಗರ್ಘ್ಯಮಂಕುಡುವನಿದೇಂಪ್ರತಾಪಗಲಿಯಾಜಗದೊ

[33]ಳುಕಟಕತ್ತಿಗಂಡರೊಳ್ ॥ ಆಕಾಳೆಯನನುಜನ್ಮಶ್ರೀಕಾಂತಂವಿಬುಧಜನಮನಃಪ್ರಿಯನೆನಿಪಂಲೋಕೋತ್ತರನೆನೆಧರ್ಮ್ಮಪತಾ

[34]ಕಂಜಯಲಕ್ಷ್ಮಿವಧುಗೆನಲ್ಲಂಮಲ್ಲಂ ॥ ಸುರಭೂಜದಶಾಖೆಯೊಳಂಕುರಕೋರಕವೆನಿಸಿಮಾರಮಾಂಬಿಕೆಗೆಮನೋಹರಮೂ

[35]ರ್ತ್ತಿಪುಟ್ಟಿದಂದಿಗ್ಭರಿತಲಸತುಕೀರ್ತ್ತಿಮಲ್ಲನಸುಹ್ರಿತ್ಸೆಲ್ಲಂ ॥ ವೃ॥ ಶ್ರೀಯಂವಿಷ್ಣುಸರೋಜಗರ್ಭ್ಭನೊಲವಿಂದೀರ್ಗ್ಘಾಯುವಂದಿಕ್ತ

[36]ಟಪ್ರಾಯೋಪಾಂತವಿಶಾಲಕೀರ್ತ್ತಿಯನುಮಾಧೀಶಂಕುಡಲ್ವಿಕ್ರಮಾಜೇಯಂಗಪ್ಪೆಯನಾಯಕಂಗವಮಳಾಂಭೋ

[37]ಜಾಸ್ಯೆಮಾರವ್ವೆಗಂಶ್ರೀಯಪ್ಪುಟ್ಟಿದರೊಪ್ಪೆಧರ್ಮ್ಮನಿಳಯಕ್ಕಾಳಯ್ಯನುಂಮಲ್ಲಯನ್ ॥ ಕ ॥ ಅವರಿರ್ವ್ವರೊಳಗೆಧರ್ಮ್ಮ
ದತವ

[38]ರೆನಿಸಿನೆಗಳ್ದನಾಯಕಾಗ್ರಣಿಮಲ್ಲಂಸಿವಪಾದಶೇಖರಂರಣಧವಳಂನರಸಿಂಹನೃಪನನಚ್ಚಿನಬಂಟಂ ॥ ವೃ ॥

[39]ತ್ರಾಸಿನೊಳಿಕಿ ತೂಗಿದವೊಲೀಕಲಿಕಾಲದಮರ್ತ್ಯನಾವನುಂಲೇಸನೆ . . ಜ್ಞೆಮಾಡದೆಮನಂದರಲಾರ್ಪ್ಪವರಿಲ್ಲಪನ್ನೆರಳ್ಳಾಸಿರಮೊ

[40]ತ್ತನಾಯಕರೊಳೋರ್ವ್ವನಕಂಡೆವುಭೀತಲೋಭಸಂತ್ರಾಸನನಿಷ್ಟಸಿಷ್ಟಪರಿತೋಷನನಪ್ಪನಸೂನುಮಲ್ಲನಂ ॥

[41]ಆನರಸಿಂಹನೃಪಾಳಂಮಾನವರೊಳ್ಸೇವ್ಯನೆಂದುನಾಯಕತನಮಂತಾನಿತ್ತುರಕ್ಷಿಪಂಚಂದ್ರಾನನೆಮಾರವ್ವೆಆತ್ಮ

[42]ಸುತಮಲ್ಲಯನಂ ॥ ವೃ ॥ ಕುಲದೈವಂಪಾರ್ವ್ವತೀಶಂಜನನಿನವಸರೋಜಾಸ್ಯೆಮಾರವ್ವೆತಾತಂಕಲಿಯಪ್ಪಂನಾಯಕಾಖ್ಯಂ

[43]ರಿಪುಕುಳವಿಳಯೋಗ್ರಾಂತಕಂಕಾಳನಣ್ಣಂಮಲೆರಾಜಂನಾರಸಿಂಹಂಪೊರೆವಪತಿಕುಲಸ್ತ್ರೀಮಹಾದೇವಿಪುತ್ರಂಬಳವದ್ವಿಟ್ಟಂಡಿ

[44]ತಂಪಂಡಿತನೆನೆಜಗದೊಳ್ಮಲ್ಲನಿಂನಂನನಾವೊಂ ॥ ಧರಣೀಚಕ್ರದೊಳೊಂದೆತಾಯಬಸಿಱೊಳಗೆಂತಾನುವೊರ್ಬ್ಬಂಮಹಾಪು
ರುಷಂಪುಟ್ಟುವರೆಂ

[45]ಬರಂನರೆತನೂಜರ್ಪ್ಪಂಡಿತಂಬಲ್ಲನುಂಪರವಂಶಾಂಗನೆಯರ್ಕ್ಕಳೊಳ್ಪತಿಹಿತರ್ಕ್ಕಾಚವ್ವೆಕಾಮಾಂಬನೀರರುಹಸ್ರೀಮುಖಿಮಾ
ದಿಯಕ್ಕನೆನಿಪೀರ

[48]ತ್ನತ್ರಯಂಪುಣ್ಯಸುಸ್ಥಿರವೇಂಸಾರ್ವ್ವಡೆವುಲ್ಲಿಕಾಜ್ಜ್ರನನೆನೊಲೆನೋಂತಂನರಾಧಾತ್ರಿಯೊಳ್ ॥ ಪುರುಷಾರ್ತ್ಥಕೆಜೆವೆಟ್ಟುಧ
ರ್ಮ್ಮದೆನಕಕ್ಕಾವಾ

[47]ಸವಾರ್ಪ್ಪಿಂಗೆವೆಯಿಸಿರಿವೀರಕ್ಕೆ ವಿಳಾಸವೆಂದುಜಗಕೆಲ್ಲಂವೆಚ್ಚಿ ಬಲ್ಲಾಳಭೂವರಸೇನಃಗ್ರಣಿಯಪ್ಪವುಲ್ಲನಳೆಯಂವಾವಂಗೆವು.

[43] . .ಪವೀ . .ರ . ರ್ಗ್ಗಡುವಗಂಧಹಸ್ತಿಯೆನಿಪೆಂಪಪ್ಪಂಗಿಬೇನೊಪ್ಪಿತೋ ॥ ನನೆಯುಸರಲ್ಲಳಂವುಕರಕೇತನವುಂಪಿಜಿದಿರ್ಪ್ಪಕ
ಬ್ಬುರ್ದವಿಲ್ಲಿ

[49]ನಿಪಸಹಾಯವುಳ್ಳಕುಸುವಾಸ್ತ್ರನವೆಜ್ಜೆದೆಕ್ತಿಗವುಲ್ಲಿಕಾಜ್ಜ್ರನನಸಹೋದರರೆಂನೆಗಳ್ದ ನಾಯಕದೇವನೆಕಾವುನೆಂದುಕಾವಿನಿಯ
ರುವಾವು

[50]ರಗಳೊಳಿನೋನ್ತುವರೊಲ್ದುಬಸಂತಕಾಲದೊಳ್ ॥ ಇದಿರೊಳೆಪಣ್ತಾಕಳ್ಪಕುಜದಾರವೆಯಿಂತಿದೆಜೇಡುವಂಗೆನುಚ್ಚಬೆಬಲಗರ್ವ್ವ
ವುಂನುಡಿ

[51]ದವಂಗೆಕೃತಾಂತಕಕಾಲದಂಡವಿಂತಿದೆಕರಣೆಂಬವಂಗೆಖಜರೇಶ್ವರನಾರ್ಪ್ಪಿದೇನೊರ್ವುದೆಂದುವಾಣದೆವೆಜಗುಂಪ್ರತಾಪನಿಧಿ

[52]ವುಲ್ಲನಬೀರದಕಾಹಳಾರವಂ ॥ ಸ್ವಸ್ತಿಸಮಧಿಗತಪಂಚಮಮಹಾಶಬ್ದವುಹಾಮಂಡಳೇಶ್ವರಂದ್ವಾರವತೀಪುರವರಾಧೀಶ್ವರಂಶ್ರೀಮ

[53]ದ್ಪ್ರಶ್ನಿಣಿಚಕ್ರನತ್ರಿವೀರಬಲ್ಲಾಳದೇವರುವಿಜಯಸಮುದ್ರವೆನಿಸಿದದೋರಸಮುದ್ರದನೆಲೆವೀಡಿನೊಳುಸುಖಸಂಕಥಾವಿನೋದದಿಂ

[54]ಪ್ರಥ್ವೀರಾಜ್ಯಂಗೆಯ್ವುತ್ತಮಿರೆತತ್ಪಾದಪದ್ಮೋಪಜೀವಿಗಳುಸ್ವಸ್ತಿಸಮಸ್ತಗುಣಸಂಪನ್ನರಪ್ಪಕಟಕತ್ತಿಗಂಡರುಂಗಂಡರಮೂ
ಕುತಿಗಳುಂಸ

[55]ರಣಾಗತವಜ್ರಪಂಜರುಂವೈರಿದಿಕ್ಕುಂಜರರುಂಸಂಭುರಾಯಕಾಡವರಾಯಕುಲಸ್ವಯರುಂಮಾಪ್ಪಾಡಿಗಂಡರುಂಧನುರ್ವ್ವಿದ್ಯಾ
ಪರಿ

[56]ಣತರುಂಪರನಾರೀಸಹೋದರರುಮುಖ್ಯವಪ್ಪಹಾಲಿಯುವೊತ್ತದಪಡೆಗಯ್ಯನೇನಾನಾಯಕಸಪ್ಪಕಾಳಿಯನಾಯಕನತಮ್ಮ

[57]ವುಲ್ಲನಾಯಕಕಲುಕಣಿಯಿಪ್ಪತ್ತಕಂಶಿರೋವುಮಣಿಯಪ್ಪನಾನಲಕೆಜ್ಜೆಯಲ್ಲಿಸಕವರ್ಷ ೧೦೭೦ ನೆಯುಬಹುಧಾನ್ಯಸಂವತ್ಸರದ

[58]ಮಾಘಸು ೧೫ ಬ್ರಿಹವಾರದುತ್ತರಾಯಣಸಂಕ್ರಮಣವ್ಯತಿಪಾತದಂದುಶ್ರೀಮಲ್ಲಿಕಾಜ್ಜ್ರನದೇವರಅಂಗಭೋಗರಂಗಭೋಗನಿ
ವೇದ್ಯನೆಂದಾ

[59]ದೀವಿಗೆಖಂಡಸ್ಫುಟಿತಜೀರ್ನ್ನೋದ್ಧಾರಕಂವುತಪೋಧನರಾಹಾರದಾನಕ್ಕಂವುಲ್ಲೆ ನಾಯಕಅಪ್ಪೆನಾಯಕಸಿನನೆನಾಯಕನವುಗ
ಕಲ್ಲೆ

[60]ವುನಾಯಕಪೆಂಗೆನಾಯಕತಮ್ಮಸೋವುಯುನಾಯಕನೊಳಗಾದಸವುಸ್ತನಾಯಕರುಂಸವುಸ್ತಗುಣಸಂಪಂನರಪ್ಪಬೊಕ್ಕಣ
ದಂಣಾಯಕರುಂಕೊ

[61]ಡ್ಡಗಯಚಿಕಗವುತ . .ಸಲಗಾಡಬಂಡಾರಿಗಾಂಡವೂರಗೊಳಿವುಖ್ಯವಾದಸವುಸ್ತಪ್ರಭುಗಾವುಂಡುಗಳುಕೂಡಿಬಿಟ್ಟುಧತ್ತಿಹಿರಿ
ಯ

[62]ಕೆಜ್ಜೆಯುವೊದಲಗದ್ದೆ ಅತ್ತಿಯುಗದ್ದೆ ಸಹಿತಸೂಕೊ ೧೦ ವುತ್ತಿಯುಕೆಜ್ಜೆಯಲಿಕೊ ೧೦ ಸೆಲವಾಗಿಕೆವಿುಕಂಬ ೧೦೦

[63] . . . . . .

[64]ಹತ್ತಿಲಕೆಯಿಕಂಬ ೧೦ ಚಿಕ್ಕ . . . . . ಕೆಯಿಕಂಬ ೧ . . . . . ಕಾಲಂಕರ್ಚ್ಚಿರ್ಧಾರಾಪೂರ್ವ್ವ . . . . . .

[65]ಕೊಟ್ಟುದು ॥ ಈಧರ್ಮ್ಮಕೆಪ್ರತಿಪಾಳಿಸಿ . . . . . ಕವಿಲೆಯ . . . . . ದಲುವೇದಪಾ . . . . . .

[66] . . . . . ವಂಗೆಕುವುಕ್ಷೇತ್ರ . . . . . .

30

ಅವೇ ಗ್ರಾಮದಲ್ಲಿ ಮಾದೇಶ್ವರದೇವರ ಗುಡಿಯ ಮುಂದೆ.

ಪ್ರಮಾಣ 6′ 6″ × 3′.

[1]ನಮಸ್ತುಂಗಶಿರಶ್ಚುಂಬಿಚಂದ್ರಿಕಾವುರಚಾರವೇತ್ರೈಳೋಕ್ಯನಗರಾರಂಭಮೂಲಸ್ತಂಭಾಯಸಂಭವೇ ॥

[2]ಭೇದಂಮೂರ್ತ್ತಿಯೊಳ್ಳದೆಭೇದಂಪರವಾರ್ತ್ಥಂತತ್ವದೊಳುಸಲ್ಲದೆನಲುಮೂದೇವರಾದೆಭೇದದನಾದೇವ

[3]ಂದೇವನೀಗೆಸುಖಸಂಪದವುಂ ॥ ಸ್ವಸ್ತಿ ಹೊಯ್ಸಳವಂಶಾಯಯದುಮೂಳುಯಯದುಭ . .ಕ್ಷತ್ರವುಕ್ತಿಕಸಂತಾನಂಪ್ರಿಶ್ವೀ
ನಾಯಕನ

[4]ಡನಂ ॥ ಆದಿತ್ತ್ಯರ್ಪ್ಪಂನಿರ್ಬ್ಬರುಮಾದೊಡಮೇಂಮಂಡಳಾಗ್ರದಿಂದಿರುಳುಂ ಸಂಪಾದಿತತೇಜನೆತಾಂವಿನಯಾದಿತ್ಯಂದಿನಪನೆನಿಸಿದಾ
[5]ತಂಜನಪಂ ॥ ಕಾಮಿನಿಕೆಳೆಯಬ್ಬರಸಿಮಹಾಮಹಿಮಂಗಾನ್ರಿಪಂಗೆನಿರ್ಮ್ಮಳಧರ್ಮ್ಮಶ್ರೀಮಹಿಮಂಗೆಹಿತಂ
[6]ಗೀಭೂಮಿಗೆಗುಣರತ್ನಭೂಮಿರಮಣೀರತ್ನಂ॥ಯಾದವವಂಶಕ್ಕಮರೆಮಹೋದಯವೆಱೆಯಂಗನ್ರಿಪತಿವಿನಯಾದಿತ್ತ್ಯಂಗಾದಂತ
[7]ನೆಯಂವಿನೆಯಂಸೋದರಮೆನೆತನಗೆನೆಗಳ್ದಧೀರೋದಾತ್ತಂ ॥ ಮಾಳವರಾಜ್ಯಮೂಳವೆನಿಪಗ್ಗದಧಾರೆಯನಾತ್ಮಸೇನೆಯಿಂಚಾಳ್ಸಿಚ
[8]ಕ್ರವರ್ತ್ತಿಗೆಜಯಂಮಿಗೆತಂನಭುಜಪ್ರತಾಪಮಂಪಾಳ್ಸೆದಿಗುಜಯಪ್ರಕಟಕೀರ್ತ್ತಿಪತಾಕೆಯನುತ್ತರಾಸೆಯೊಳ-ಕೀಲಿಸಿದಂ
[9]ದಿನೇಷನಗಿದೀಕ್ಷಿಸುವಂತೆಱೆಯಂಗಭೂಭುಜಂ॥ ಜೆಟ್ಟಗರದಟರನದಟರೆವೊಟ್ಟಜಿಗಲಿಗಳುಮಹಾನುಭಾವರ್ಮ್ಮದದಿಂಪುಟ್ಟಿದ
ರೇಚಲ
[10]ದೇವಿಗೆನೆಟ್ಟನೆಬಲ್ಲಾಳವಿಷ್ಣುವುದಯಾದಿತ್ಯರು ॥ ದೋರಸಮುದ್ರದಲ್ಲಿಜಗದೇವನಸೇನೆಯನಿಕ್ಕಿತಂಮತೋಳುವೀರಸಮುದ್ರ
[11]ಮಾಗಿಜಯಲಕ್ಷ್ಮಿಗೇಂತದುಗಜವಕುತ್ರರಕುತಕಾಸ್ಮೀರವಿಲೇಪಮಂನೆಱಪಿತತ್ಪದಕಂಪೆರಸೆಯ್ದಿಕೊಂಡುಭಂಡಾರಮನಾನ್ರಿಪ
ರ್ತ್ತಳೆದ
[12]ಬೀರಮನಾರೊಗಭೀರಮೆಂನದರು ॥ ಮೊದಲೊಳುಹೊಯ್ಸಣರಾಜ್ಯಲಕ್ಷ್ಮಿಯೊದವಂತೋಳುವಲುಪಿನಿಂತಾಳ್ದಿತಂನುದಯಂರ
[13]ಂಜಿಸೆತಂನಬಲುಪೊದವೆತಂನಾರ್ಪ್ಪೇಱೆತಂನಾಜ್ಞೆಮಿಾಱೆದಿಶಾಚಕ್ರಮನೊತ್ತಿಕೊಂಡುತಳಕಾಡಂಗಂಗರಾಜ್ಯಕ್ಕೆತಾಂಮೊದಲಾ
[14]ದಂಯದುವಂಸವರ್ದ್ಧನಕರಂಶ್ರೀವಿಷ್ಣುಭೂಪಾಳಕಂ ॥ ಕಮಳಾಕ್ಷಂಪುರುಶೋತ್ತಮಂವಿಬುಧಲೋಕಾಹ್ಲಾದನಂದ್ವಿಷ್ಟದೈ
ತ್ಯಮದಧ್ವಂಸ
[15]ನನಂತಭೋಗಯುತನುರ್ವ್ವೀಧಾರಧೌರೇಯನುತ್ತಮಸತ್ವಾಂನ್ವಿತನುದುಘಯಾದವಕುಳಾಳಂಕಾರನೆಂದಿಂತುವಿಷ್ಣುಮಹೀಸ
[16]ಂಸಲೆತಾನೆವಿಷ್ಣುವೆನಿಪಂಲಕ್ಷ್ಮೀವಧೂವಲ್ಲಭಂ ॥ ಸುರಭೂರುಹದೆಸೆವಂಕುರಧರೆಗೊಗೆದುದೆನಲುಕೆನಾರಸಿಂಹನ್ರಿಪಾಳಂವರವ
[17]ಧುಲಕ್ಷ್ಮಾಂಬಿಕೆಗಂಪರಮಗುಣಾಂಬುಧಿಗವಗ್ಗ್ರಸುತನೆನೆನೆಗಳ್ದಂ ॥ ಇದಿರಾದರಿಭೂಪಾಳರಮದದಾನೆಯಕೊಂಬನುಡಿದುದಂ
[18]ತದಬಳೆಯಂಬಿದುವಿನಮುತ್ತಿನಹಾರಮನೊದವಿಸಿಜಯಸಿರಿಗೆತೊಡಿಸುವಂನರಸಿಂಹಂ ॥ ಪಟ್ಟದಸತಿಮಹದೇವಿಯೆನೆಟ್ಟನೆ
[19]ನರಸಿಂಹನರಸಿಯಾಕೆಯಬಸುಱೊಳುಪುಟ್ಟಿದಬಲ್ಲುನ್ರಿಪಾಳಕನೆಟ್ಟನೆಗುಣನಿಳಯವೀರವಿಕ್ರಮತೇಜಂ ॥ ದಿಗಧಿಪರಂ
[20]ಪಳಂಚಲೆವವಿಕ್ರಮದೇಳ್ಗೆನಗಂಗಳೇಳುಮಂನೆಗಪಲೊಡರ್ಚ್ಚುವುಜ್ಜುಗದತೋಳ್ವಲಮಾನೆಗಳ್ದರ್ಕ್ಕಬಿಂಬಮಂ ಸುಗಿಯಿಪತಿ
ಬ್ರತೇಜಮಿವು
[21]ತಂನೊಳೆಸಂನುತಮಾದುವೆಂದೊಡಾನ್ರಿಗನಹುಷಾದಿಗಳುದೊರೆಯೆಬಲ್ಲುನ್ರಿಪಾಳನವೀರದೇಳ್ಗೆಯೊಳು ॥ ಘನಷೌರ್ಯ್ಯಂಬಲ್ಲು
[22]ಭೂಪಂನಿಜವಿಜಯಹಯಾರೂಢನಾಗಲುಕಳಿಂಗಂವನವಾಶೋದ್ಯುಕ್ತನಾದಂತುಳುವನಳವಿಗೆಟ್ಟೋಡಿದಂಕೊಂಕಣಂಭೋಂಕೆ
ನೆಪುಂ
[23]ಣ್ಯಾರಣ್ಯಮಂಸಂವರಿಸಿದನಗಿದಂಗೂರ್ಜ್ಜರಂಮಾಳವಂವಿಂಧ್ಯನಿಕುಂಜಪ್ರಾಪ್ತನಾದಂಜಳಧಿನಿಕಟಮಂಚೋಳಿಕಂವೇಳೆಗೊಂ
ಡಂ ॥
[24]ಸ್ವಸ್ತಿಸಮಧಿಗತಪಂಚಮಹಾಸಬುದಮಹಾಮಂಡಳೇಶ್ವರಂದ್ವಾರಾವತೀಪುರವರಾಧೀಶ್ವರಂತುಳುವಬಳಜಳಧಿಬಡವಾನಳಂ
[25]ದಾಯಾದದಾವಾನಳಂಪಾಂಡ್ಯಕುಳಕಮಳವನವೇದಂಡಗಂಡಭೇರುಂಡಮಂಡಳಿಕಬೇಂಟೆಕಾಱಪರಮಂಡಳಸೂಱೆಕಾಱಸಂಗ್ರಾ
[26]ಮಭೀಮಂಕಲಿಕಾಲಕಾಮಸಕಳವಂದಿಬ್ರಿಂದಸಂತರ್ಪ್ಪಣಸಮರ್ತ್ತವಾಸಂತಿಕಾದೇವೀಲಬುಧವರಪ್ರಸಾದಮ್ರಿಗಮದಾಮೋದ
ನಾಮಾ
[27]ದಿಪ್ರಸಸ್ತಿಸಹಿತಂ ಶ್ರೀಮನುಮಹಾಮಂಡಳೇಸ್ವರಂತಳಕಾಡುಕೊಂಗುನಂಗಲಿಗಂಗವಾಡಿನೊಣಂಬವಾಡಿಬನವಸೆಹಾನುಂಗಲು
ಗೊ
[28]ಂಡಭುಜಬಳವೀರಗಂಗನಸಹಾಯಸೂರನಿಸ್ಸಂಕಪ್ರತಾಪಹೊಯ್ಸಣವೀರಬಲ್ಲಾಳದೇವರುಸಕಳಮಹೀಮಂಡಳಮಂದುಷ್ಟನಿ
ಗ್ರ
[29]ಹಸಿಷ್ಟಪ್ರತಿಪಾಳನಂಗೆಯ್ದುರಕ್ಷಿಸುತ್ತುರೆದೋರಸಮುದ್ರದನೆಲೆವೀಡಿನೊಳುಸುಖಸಂಕಥಾವಿನೋದದಿಂರಾಜ್ಯಂಗೆಯ್ವುತ್ತಮಿ
[30]ರೆತದೀಯಪಾದಪದ್ಮೋಪಜೇವಿ ॥ ವಾಜಿಕುಳಕಳ್ಪಭೂಜಂವಾಜಿಕುಳಾಂಭೋಜಲಕ್ಷ್ಮಿಹುಳ್ಳಚಮೂಪಂವಾಜಿಕುಳತಿಳಕನೆಸೆ
ದಂರಾಜ

[31]ಸಭಾಯೋಗ್ಯನನುಪಮಂವಸುಮತಿಯೊಳು ॥ ಎನೆನೆಗಳ್ದಹುಳ್ಳರಾಜಂಗನುನಯದಿಂದಂಣನೆನಿಸಿಸೊಗಯಿಪನೆನಸುಂವನುಚರಿ
ತದುರಿ

[32]ತದೂರಂವಿನಯಪರಂಕಂಟಿವುಯ್ಯನನುಪಮತೇಜಂ ॥ ಎರದಗ್ಗಾಸ್ಯೈಸಿಬಂದಗ್ಗಿಡಬಿಡಿಸಿದವಗ್ಗಿಕ್ಕು ಪಟ್ಟರ್ಗೆಕೆಟ್ಟಗ್ಗಿ
ರವಿಸ್ಪಕ್ಯಾತಜಾತ

[33]ಂವೆಗುಳ್ದಯಿಸ್ಸದಂತೆತ್ತಪಂಕೂಡೆಲೋಕೋತ್ತರನೂಗಲುವಾಜಿವೆಂಕೋತ್ತಮನವುಳಗುಣಾಳಂಕ್ರಿತಂಧವ್ಯರತ್ನಾಕರ
ನುದ್ಭಾ

[34]ಟೋಪಪಂಚಾನನನನುಪಮತೇಜೋನಿಧಿಕಂಟಿವುಯ್ಯಂ॥ ಜನಕನನೂನದಾನಪತಿವಾಜಿಕುಳಿಕೋತ್ತಮನೊಳ್ಪುವೆತ್ತಹೆಂಪಿನವು

[35]ದುಸೂದನಂಜನನಿಜಾಹ್ನವಿಸದುಗುಣಿವುದ್ದಿಯುಕ್ತನೀವನಸಿಜಮದ್ದನಂಸುರಗಣಾಬ್ಜಿತನೀಶ್ವರನಿಷ್ಟದೆಯ್ವವೆಂದನುನ
ಯದಿಂದೆಬಂ

[36]ಣಿಪ್ರದುಧಾರಿಣಿಹೆಗ್ಗಡೆಕಂಟಿವುಯ್ಯನೆಂ ॥ ಕ್ಷಿತಿವಿನುತೆಕಂಟಿವುಯ್ಯನಸತಿಸಂನುತೆಕಾಳಿಯುಕ್ತನತಿಸಯದಿಂವಂಪತಿ

[37]ಹಿತೆದಾನೋಂನತಿಯಿಂದತಿಗಗ್ಗಳವೆನಿಸರೂಪಿನಿಂಸೊಗಯ್ಸುಗುಂ ॥ ಹುಟ್ಟಿದರವರೀರ್ವ್ವರಿಗಂನೆಟ್ಟನೆನಿಸವದೇವಮಬುಹಣಂಸ
ದುಗು

[38]ಣಿಗಳುಬಟ್ಟಿಗೆಯೊಳುಬರೆದಂತಿರೆದಿಟಿಗೆವರೆಸೊಗಯಿಸಿಪ್ಪರೀವಸುಮತಿಯೊಳು ॥ ಎತ್ತಿಸಿದಂಧರಿತ್ರಿಹೊಗಳಲುಮುದದಿಂಸಿವ
ರಂಮ್ಯೆ

[39]ಗೇಹವುಂತೆತ್ತಿಸಿದಂದಿಶಾವಳಿಯಬೊಳುನೆಜಿಪ್ಪೆಕೀರ್ತ್ತಿಯನೊಲ್ಪುರಾಗದಿಂಗುತ್ತನಚಾರುದತ್ತನೆಣೆಯೆಂಬುದುಧಾರಿಣಿಕಂಟಿವು
ಯ್ಯನಂಳು

[40]ತ್ತಮತೇಜನಂಸುಚಿಯನೊಳಗುಣಿಯಂಪದಪಿನಿರಂತರಂ॥ ಅನುಜಾತಂಹರಿಯಣ್ಣನಂಘೆನಷಾಯ್ಯರ್ಯಂಹೆಂಪುವೆತ್ತಹೆಂಮ್ಮೆಯನ

[41]ಳಿಯಂಜನವಿನುತಕಂಟಿವುಯ್ಯಂಗನುನಯದಿಂತಂಗೆಯಲ್ತೆದುಗ್ಗಲೆಮುದದಿಂ ॥ ಜವನೊಡನಾದಡಂಸೆಣಸಿಜತ್ತಕುಜಡುವವೀ

[42]ರವೆಂದೊಡೀಧುವನದೊಳಾಂತುನಿಂದರಿನ್ರಿಪಾಳರನುಂಗುವಕಾಲಮಿತ್ತು ಆಹವದೆಡೆಗಾಗಳಂಬಿಡದೆಬೀಸುವನಂಜಿನ

[43]ಗಾಳಿಯಂದೊಡಿಂನಿಪನಪೊಡಪ್ಪನೇವೇಳ್ವದೊಕಲಿಹೆಂವನನಾಜಿಗುಂವನಂ॥ ತಂದೆಗಳಹೆಸರಕೀರ್ತ್ತಿಗಳೆಂದುಂಕಿಡದಂತೆವಾ
ರ್ವ್ಯೆನಾ

[44]ನೆಂದೀಗಳುಬಂಧುಜನಂಗಳುಹೊಗಳಲುಕಂದಂಸಾಶನವೆನಿಲಿಸಿದಂಸಿವದೇವಂ॥ ಹುಟ್ಟುವುದುವೊಡನೆಧವ್ಯರ್ಂಹುಟ್ಟಿದುದಂತಂ

[45]ತೆಬೆಳೆಯೆಬೆಳೆದುದುತೇಜಂನೆಟ್ಟನೆಧರೆಯೊಳಗೆನಲೇಂಹುಟ್ಟಿದನೊಮಹಂತಗುಣಿಯೆನಲುಸಿವದೇವಂ ॥ ಸ್ವಸ್ತಿಶ್ರೀವನುವುಹಾ

[46]ಪ್ರಧಾನಂಹೆಗ್ಗಡೆಕಂಟಿವುಯ್ಯನುಂವುಹಾಪ್ರಧಾನಂದಂಡನಾಯಕಜಕೊಕ್ಕಣಿನುಂದಂಡನಾಯಕಹರಿಯಂಣನುಂ

[47]ನಾನಲಕೆಜ್ಜೆಯನವುಸ್ತ ಪ್ರಜೆಗಾವುಂಡುಗಳುಮಿದ್ದುಸಕವರುಶ ೧೦೯೬ನೆಯಪಾರ್ತ್ತಿವಸಂವತ್ಸರದವೈಶಾಖಸುದ್ಧ

[48]ತ್ರಯೋದಸಿಬ್ರಿಹವಾರಉತ್ತರಾಯಣಸಂಕ್ರವುಣಬ್ಯತೀಪಾತದಂದುವುದುಕೇಶ್ವರದೇವರಅಂಗಭೋಗರಂ

[49]ಗಭೋಗನೈವೇದ್ಯನಂದಾದೀವಿಗೆಖಂಡಉಟಿತಜೀಣ್ಣೋರ್ದ್ಧಾರಕ್ಕಂವುಪತಿತಪೋಧನರಆಹಾರದಾನಕ್ಕವಾಗಿವುದುಕರಾಸಿ

[50]ಪಂಡಿತರಕಾಲಂಕಚ್ಚಿರ್ದಧಾರಾಪೂರ್ವ್ವಕಂವೊಡಿಬಿಟ್ಟದತ್ತಿವ್ಯತ್ತಿಯುಕೆಜ್ಜೆಯುಕೆಳಗೆಗದ್ದೆತೋಟದಿಂಹಡುವಲುಸಲಗೆ ೂಹೆ

[51]ಗ್ಗಡೆಯಕೆಜ್ಜೆಯುಕೆಳಗನಿವೇದ್ಯದಗದೆಸ ೧ ಜೆದ್ದಲೆದೇವರಸಂನಿಧಾನದಲುಕೆಳಗಂ ೧೦ ದೇವರನಂದಾದೀವಿಗೆಗೆಬಿಟ್ಟಕಲ್ಲಕ್ಕೈ

[52]ಗಾಣ ೧ ಇಂತೀಧರ್ಮ್ಮವುಂಪ್ರತಿಪಾಳ್ಪಿದವರುಗಂಗೆವಾರಣಾಸಿಕುರುಕ್ಷೇತ್ರದೊಳುಸಹಸ್ರಕವಿಲೆಯುಕೋಡುಂ

[53]ಕೊಳಗುವುಂಹೊಂನಲುಕಟ್ಟಿಸಿಸಹಸ್ರಬ್ರಾಹ್ಮಣರಿಗೆಕೊಟ್ಟಫಲವುಕ್ಕು ಇಂತೀಧರ್ಮ್ಮವುಂಕಿಡಿಸಿದವರುಗಂಗೆವಾ

[54]ರಣಾಸಿಕುರುಕ್ಷೇತ್ರದೊಳುಸಹಸ್ರಕವಿಲೆಯುಂಸಹಸ್ರಬ್ರಾಹ್ಮಣರುವುನಿದನರಕಕ್ಕಿಳಿವರು ॥ ದಕ್ಷಿಣಹೆಂವುನವು

[55]ಂವುಂಲಾಕ್ಷಣಗವಿಶಾಂತಿನಾಥಕವಿಕುಳತಿಳಕಂದುಷ್ಕಿಂಣ್ಯನಿಧಿಗುಣೋತ್ತರಸಿಕ್ಷಾಗುರುಜೇಳ್ದನತ್ತಿಯಿಂಸಾಶನವುಂ ॥ ಇದನಾ

[56]ವಂನಿಜಕಾಲದೊಳುಸುವಿಧಿಯಿಂಪಾಳಿಪ್ಪಲೋಕೋತ್ತವುಂವಿದಿತಂನಿರ್ಮ್ಮಳಪುಣ್ಯಕೀರ್ತ್ತಿಯುಗವುಂತಾನೆಯ್ದುವಂವುತ್ತ
ವಿಂತಿದನಾವಂ

[57]ಕೆಡಿಪೊಂದುಕೆಟ್ಟಬಗೆಯಿಂತಂದಾತನಾಳ್ಗಂಗಭೀರದುರಂತೋತ್ತಟದುಃಕ್ಕದೊಳುನರಕದೊಳುದುಃಕ್ಕಿರ್ತ್ತಿವೆಂಕಾಂಕುಳಂ ॥
ಶಿವಾಯ ॥

31

ನೆಲ್ಲಿಕೆರೆ ಹೋಬಳಿ ಕದಬಳಿ ಗ್ರಾಮದ ಈಶ್ವರಗುಡಿಗೆ ದಕ್ಷಿಣ ನೆಟ್ಟ ಕಲ್ಲಿನಲ್ಲಿ.

ಪ್ರಮಾಣ 4′ 6″ × 2′.

[1]ಶುಭಮಸ್ತು ಸ್ವಸ್ತಿ ಶ್ರೀ
[2]ಜಯಭ್ಯುದಯಶಾಲಿವಾಹ
[3]ನಶಕಸಂ. ೧೪೮೨ನೆಯರಉದ್ರಿ
[4]ಸಂವತ್ಸರದವಯಿಶಾಖಸು ೧೫ ಪುಂ
[5]ಣ್ಯಕಲದಲೂಶ್ರೀಮತುಕಹಿನತಿರು
[6]ಮಲದೇವರಶ್ರೀಪದಸೇವೆಗೆಬಲೆನಯ
[7]ಕರಮಕಳುಱೊಡವನಯಕರುಲಖ
[8]ಪನಯಕರಮಕಳುಕೆಂಚಪನಯಕರು
[9]ನಮವೊಡೆಯವಿರುಪರಜವೊಡೆಯ
[10]ರಿಗೆಪುಣ್ಯವಗಲಿಎಂದುಪಳುರಸೀಮೆ
[11]ಯೊಳಗೆಗ್ರಾಮ ೧ ದನುದರೆನೆಱದುಕೊ
[12]ಟೆವಗಿಯಿಂಧರ್ಮ್ಮಕೆಆರುಅಳುಪಿದವ
[13]ರುತಂಮತಂದೆತಾಯಿಗೋವುಬ್ರಾಹ್ಮರನು
[14]ವಾರಣಸಿಲಿಕೊಂದಪಪಕೆಹೋಹರುಎ
[15]ಂದುಕೊಟಸಿಲಾಸಾಸನಶ್ರೀಕಹಿನದೇವರು

32

ಅದೇ ಹೋಬಳಿ ಅಳೇಸಂದ್ರದ ಹೆಬ್ಬಾಗಿಲಿಗೆ ದಕ್ಷಿಣ ಬಿದ್ದಿರುವದು.

ಪ್ರಮಾಣ 9′ × 3′ 3″.

[1]ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂಜೇಯಾತ್ತ್ರೈಳೋಕ್ಯನಾಥಸ್ಯಶಾಸನಂಜಿನಶಾಸನಂ ॥ ವೀತರಾಗ
[2]ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಣ್ಡಳೇಶ್ವರಂದ್ವಾರಾವತೀಪುರವರಾಧೀಶ್ವರಂಯಾದ
[3]ವಕುಳಾಂಬರದ್ಯುಮಣಿಸಂಮ್ಯಕ್ತಚೂಡಾಮಣಿವಾಸನ್ತಿಕಾದೇವೀಲಬ್ಧವರಪ್ರಸಾದಮಲೆಪರೊಳುಗಣ್ಡಾದ್ಯನೇ
[4]ಕನಾಮಾವಳೀಸಮಾಳಂಕ್ರಿತರಪ್ಪಶ್ರೀಮತ್ತ್ರಿಭುವನಮಲ್ಲವಿನೆಯಾದಿತ್ಯಹೊಯ್ಸಳಂಕೊಂಕಣದಾಳ್ವಖೇಡದಬಯಲ್ನಾಡ
[5]ತಳೆಕಾಡಸಾವಿಮಲೆಯಿನೊಳಗಾದಭೂಮಿಯೆಲ್ಲಮಂದುಷ್ಟನಿಗ್ರಹಶಿಷ್ಟಪ್ರತಿಪಾಳನೆಯಿಂ ॥ ಸಳನೆಂಬನಾಗೆಯಾದ
[6]ವಕುಳದೊಳುಪುಲಿಪಾಯೆಕಂಡುಮುನಿಪುಲಿಯಂಪೊಯ್ಸಳಯೆನೆಪೊಯಿದದಱಿಂಪೊಯ್ಸಳವೆಸರವನಿಂದವಾಗೆತದ್ವಂಶಜರೊ
ಳು ॥ ಕಂದ ॥ ಸಳನೃ
[7]ಪನಿಂಬಳಿಯಂಯದುಕುಳಬೀರರ್ಪ್ಪಲಬರೊಗೆದರವರಂನ್ವಯದೊಳುಬಳವದ್ವಿರೋಧಿಭೂಭೃತ್ಕುಳಿಶಂಜನಿಯ್ಸಿದನೆಸೆಯೆವಿನೆ
ಯಾದಿತ್ಯಂ ॥ ಬಲಿದ
[8]ಡೆಮಲೆದಡೆಮಲೆಪರತಲೆಯೊಳುಬಾಳಿಡುವನುದಿತಭಯರಸವಸದಿಂಬಲಿಯದಮಲೆಯದಮಲೆಪರತಲೆಯೊಳುಕೈಯಿಡು
[9]ವನೊಡನೆವಿನೆಯಾ[ದಿ]ತ್ಯಂ ॥ ಆಮಣ್ಡಳೇಶ್ವರನಮನೋಸಯನವಲ್ಲಭೆ ॥ ಪರಿಜನಕಂಪುರಜನಕಂಪರಮಾರ್ತ್ಥಂತಾನೆಪುಣ್ಯ
ದೇವತೆಯೆನಲೇಂಧರೆಯೊ
[10]ಳುನೆಗಳ್ದಳೊಕೆಳೆಯಬ್ಬರಸಿಜನಾರಾಧ್ಯೆಭುವನವನಿತಾರತ್ನಂ ॥ ಅನ್ತುತದಿರ್ಬ್ಬರುಂಸುಖಸಂಕಥಾವಿನೋದದಿಂಸೊಸವೂರನೆಲೆ
ವೀಡಿನೊಳುರಾಜ್ಯಂಗೆಯ್ಯು
[11]ತ್ತಮಿರ್ದ್ದಾಕೆಳೆಯಲದೇವಿಯರುಮಱಿಯಾನೆದಂಡನಾಯಕನಂತನ್ನತಂಮನೆಂದುರಕ್ಷಿಸಿವಿನಯಾದಿತ್ತ್ಯಪೊಯ್ಸಳದೇವರುಂ
ತಾನುಮಿರ್ದ್ದುಮಱಿಯಾನೆ
[12]ದಂಡನಾಯಕಂಗೆದೇಕವೆದಂಡನಾಯಕಿತಿಯಂಕಂನ್ಯಾದಾನಂಮಾಡಿಆಸಂದಿನಾಡಸಿಂದಗೆಱೆಯಂಪ್ರಭುತ್ವಸಹಿತಂನೆಲೆಯಾಗಿಸ
ಕವರ್ಷ ೯೬೧ ನೆ
[13]ಯಸರ್ಬ್ಬಜಿತ್ಸಂವತ್ಸರದಪಾಲ್ಗುಣಸುದ್ಧತದಿಗೆಸೋಮವಾರದಂದುಕನ್ಯಾದಾನಮುಂಭೂಮಿದಾನಮುಮಂಧಾರಾಪೂರ್ಬ್ಬಕಂ
ಕೊಟ್ಟುಸ್ವಧರ್ಮ್ಮದಿಂರಕ್ಷಿಸುತ್ತಮಿ

[14]ರೆ ॥ ಧರಣಿಗೆನೆಗಳ್ದ ಪೊಯ್ಸಳನರಪತಿಗಂಕಮನಕಂಬುಕಂಧರೆಕೆಳಿಯಬ್ಬರಸಿಗೆಮುದಿಯಿಸಿನೆಗರ್ದ್ದಧರಿತ್ರಿಯೊಳುವೀರಗಂಗ
ನೆಜಿಯಂಗ

[15]ನೃಪಂ ॥ ಅವಿಭುಗಂನೆಗಳ್ದಿ ೦ಚಲದೇವಿಗಮುದಿಯಿಸಿದರೆದಟರೆನೆಬಲ್ಲಾ ಳಕ್ಷ್ಮಾವಲ್ಲಭವಿಷ್ಣು ಧರಿತ್ರವಲ್ಲಭಸುಭಟನುದಿತನುದೆ
ಯೂದಿತ್ತ್ಯಂ ॥ ಎನಿತಿತ್ತಡವೆನಿ

[16]ತಿಜಿದಡನುನಿತೊಪ್ಪಂಕೂಪ್ಪ್ಯಮಪ್ಪುವೆಪೆಜಿಗ್ಗರ್ದ್ದುಕೆಂಬುನೆನೋಡವಿಟರೆಬಲ್ಲಾ ಳನೃಪಾಳನೆಚಾಗಿಬಲ್ಲುದೇವನೆಜೀರಂ॥ ಅ
ನ್ತಂಸುಖಸಂಕಥಾವಿ

[17]ನೋದದಿಂಶ್ರೀಮದ್ರಾಜಧಾನಿಪಲುಹುರಬೀಡಿನೊಳುರಾಜ್ಯಂಗೆಯ್ಯುತ್ತಮಿರ್ದ್ದಾವಜಿಯಾನೆದಂಡನಾಯಕನದ್ವಿತೀಯಲಕ್ಷ್ಮೀಸ
ಮಾನೆಯುರಪ್ಪಚಾ

[18]ಮುವೆದಂಡನಾಯಕಿತಿಗಂಪುಟ್ಟಿದಪದುಮಲದೇವಿಚಾಮಲದೇವಿಜೊಪ್ಪಾದೇವಿಯರಿನ್ತೀವುಮೂವರುಂಕಾಸ್ತ್ರಗೀತನೃತ್ಯದಲುಪ್ರಪು
ಡೆಯರುಂಮೂ

[19]ಱುರಾಯಕಟಕಪಾತ್ರಜಗದಳೆಯಬೆನಿಸಿಬಳೆಯಲಾಮೂವರುಕನ್ಯೆಕೆಯರನೊಂದೇಹಸೆಯೊಳುಬಲ್ಲಾ ಳದೇವಂವಿವಾಹವಡಿಸ
ಕವರ್ಷಂ

[20]ಂಂಗಿ ನೆಯಸುಭಾನುಸಂವತ್ಸರದೆಕಾರ್ತ್ತಿಕಶುದ್ಧದಸಮಿಬೃಹವಾರದನ್ದುವೊಲೆವಾಲರಿಣಕ್ಕೆ ವುಜಿಯಾನೆದಣ್ಡನಾಯಕಂಗೆ
ಸಿಂದಗೆ

[21]ಜಿಯುಎರಡನೆಯಪರ್ಯ್ಯಾಯದಲುಪ್ರಭುತ್ವಸಹಿತಂನೆಲೆಯಾಗಿಪುನರ್ದ್ದಾರಾಪ್ರುರ್ವ್ವಕಂಕೊಟ್ಟುಸಲಿಸುತ್ತಮಿರೆ ॥ ತುಳು
ದೇಶಂಚಕ್ಕ್ರ

[22]ಗೊಟ್ಟುಂತಳವನೆಪುರಉಚ್ಚಂಗಿಕೋಳಾಲಪಿಳುಂವುಲೆವೆಲ್ಲೂಕ್ಕ್ರಂಚಿಕಂಗುಬ್ಬಿಸುವಹಡಿಯಘಟ್ಟುಂಬಯಲುನಾಡುನೀಳಾವಕ
ಳದುಗ್ಗರಾಯು

[23]ರಾಯೋತ್ತವುಪುರತೆಜಿಯೂಕೊಳ್ಳಿಯುತೊಗ್ಗೊಂದವಾಡಿಸ್ಥಳವಂಭ್ರೂಭಂಗದಿಂಗೆಲುದತುಳಭುಜಬಳಾಟೋಪದಿಂವಿಷ್ಣು
ಭೂಪಂ ॥

[24]ಅರಿನೃಪರಂತಡಂಗಡಿದುಜೇಲಿಯನಿಕ್ಕಿಪಟುಪ್ರತಾಪವುಬ್ಬಿರೆತಳಕಾಡನಿಜುಗಡಿದಳುಕುಜಿಸುಟ್ಟುತುರಂಗದಂಭ್ರಸಂಚರಣದಿ
ನುತ್ತು

[25]ವೀರರಸದಿಂಪದನಾಡೆಕೂಡೆಜಿತ್ತಿದಂಸುರುಜಿರಕೀರ್ತ್ತಿರ್ಯಂನೃಪತಿಖಾವುಣಿಸಾಹಸಗಂಗಕೊಯ್ಸುಳಂ ॥ ಸ್ವಸ್ತಿಶ್ರೀಮತುಕಂಚಿ
ಗೋಡವಿಕ್ರಮ

[26]ಗಂಗವಿಷ್ಣುವರ್ದ್ಧನದೇವಂದೋರಸಮುದ್ರದನೆಲೆವೀಡಿನೊಳುಪೃಥ್ವೀರಾಜ್ಯಂಗೆಯ್ಯುತ್ತಮಿರೆತತ್ಪಾದಪದ್ಮೋಪಜೀವಿಗಳಪ್ಪಹಿರಿ
ಯಮಱಿಯಾನೆದಂ

[27]ಡನಾಯಕನಮಯ್ದುನನಪ್ಪಗೆಂಗರಾಜದಂಡಾಧೀಶಂ ॥ ಮೆತ್ತಿನಮಾತವತ್ತಿರಲಿಜೇರ್ನ್ನಿಜಿನಾಲಯಕೋಟಿಯಂಕ್ರಮಂಪೆತ್ತಿರೆ
ಮುಂನಿ

[28]ನನ್ತೆಪಲವೂಗ್ಗರ್ಳುಮಂನೆಜಿವಾಡಿಸುತ್ತವತ್ಯುತ್ತಮಪಾತ್ರದಾನದೊದವಂವೆಜಿವುತ್ತಿರೆಗಂಗವಾಡಿತೊಂಭತ್ತಜಿನಾಯಿರಂ
ಕೊಪಣವಾದುದುಗಂ

[29]ಗಣದಂಡನಾಥನಿಂ ॥ ತತ್ತನಯಃ ॥ ಕದನದೊಳಾಂತರಂಗೆಲುವಡೆಂಗಳನಿಂನಪೆಸಜ್ಜೆತಾರಿಯೆಂಬುದೆಬುಧಬಂಧುವೆಂಬುದೆಜನಾ
ಗ್ರಣಿಯೆಂಬು

[30]ದೆಜೊಪ್ಪದೇವನೆಂಬುದೆಕಲಿಯೆಂಶ್ರೀರಾಜವಿಭುವೆಂಬುದೆಗಂಗನಗಂಧಹಸ್ತಿಯೆಂಬುದೆರಣರಂಗಪ್ರಚಂಡಸುತನೆಂಬುದೆವೈರಿಘಿರಟ್ಟು
ನೆಂಬುದೇ ॥ ಆ

[31]ತನಮಯ್ದುನರುಸಮುಸ್ತರಾಜ್ಯಭರನಿರೂಪಿತಮಾಸಮಾತ್ಯಪದವೀಪ್ರಖ್ಯಾತರು(ಂ)ಮಭಿಜಾತರುಂಶ್ರೀಮದರ್ಹತ್ಪರಮೇಶ್ವರಪದ
[32]ಪಯೋಜಶಟ್ಪದರುಂ । ರತ್ನತ್ರಯಾಳಂಶ್ರೀಮನ್ಮಹಾಪ್ರಧಾನಂಮಱಿಯಾನೆದಂಡನಾಯಕನುಂಶ್ರೀಮದಾದಿಭ
ರತೇ

[33]ಶ್ವರನೆನಿಸಭರತೇಶ್ವರದಂಡನಾಯಕನುಂತಂವೊಳಭೇದಭಾವದಿಂಗುಣಿಗುಣಿಶ್ವರೂಪರಾಗಿ ॥ ಉಂತವಂಶನುತ್ಸವಕಾಲೋತ್ತೆ
ಮಭದ್ರಗುಣಾನ್ವಿ

[34]ತಂಜಗತ್ಸಂನುತದಾನಯುಕ್ತ ವಿಭವಂ ಮಱಿಯಾನೆರಿಪುಪ್ರಭೇದನೋತ್ಪಂನಜಯಾಭಿರಾಮನೆನೆಗೀತನೆನಚ್ಚಿನಪಟ್ಟದಾನೆಯೆಂದಂ
ನೆಜನೆನಚ್ಚಿ ವಾ

[35]ಡಿದನೊವಿಷ್ಣುನೃಪಧ್ವಜನೀಪ್ರತಿತ್ವಮಂ ॥ ಜಿನಪತಿದೆಯ್ವವಾತ್ಮಜನಕಂಪ್ರಭುವೆಗ್ಗಡೆದೇಚಿರಾಜನೊಳುಖನಕಣಿತಂನತಾಯಿ
ನೆಗಳ್ದನಾಗಲ

[36]ದೇವಿಚವಮೂಪವಕ್ತ್ರಜಂದನತಿಳಕಂಮಱಿಯಾನೆಚವಮೂಪತಿನಾಥನಿಂತುಸಜ್ಜನವಿನುತಾನ್ವಯೋನ್ನತಿಯಿಜಕ್ಕಲದೇವಿಯಿಧ
ನ್ಯೆಧಾತ್ರಿಯೊಳು ॥

[37]ತೊಳತೊಳಗಿಪಳಗಿಕೀರ್ತ್ತಿವಳಯವಿನಳವಟ್ಟವಿಷ್ಣು ಭೂಪನರಾಜ್ಯಸ್ಥಳಕಮಿಸುಪೆಸೆವಜೇಮದಕಳಸಂಕೇನಳಮೆಂಭರತದಂ
ಡಾಧೀಶಂ ॥ ಕಾಂತಂಶ್ರೀಭವ್ಯಚೂ

[38]ಡಾವಮಣಿಭರತಚವಮೂನಾಥನತ್ಯಂತಿಕಶ್ರೀಕಾನ್ತಂತ್ರೈಲೋಕ್ಯನಾಥಂಪರಮಜಿನನೆದೆಯ್ವಂನಮಭ್ಯಸ್ತಸತ್ಸಿದ್ಧಾಂತಂಶ್ರೀಮೂಳ
ಣಂದಿಬ್ರತಿಪತಿಗುರುಗಳಂ

[39]ತಂದೆವಾರೈಯನೆಂದಂದೆಂತುಂತಾಂಧೆನ್ಯಯೆಂದೀಹರಿಯಲೆಯನೆಭೂಮಂಡಳಂಬಿಚ್ಚಿಕ್ಕಂ ॥ ಎಣಿಕೆಯಲೋಕದಗಣಿಕೆಯು
ರೆಣಿಯಲ್ಲರುನೋ

[40]ಜಚಿಕ್ಕ ಹರಿಯಲೆಗಾರುಂಗುಣದೊಳ್ಳುಸಾಸನದೇವಿಯರಣೆಯಪ್ಪರುಭರತರಾಜನದ್ಧಾಂಗನೆಗಂ ॥ ಇಂತುಪ್ರೊಗಳ್ದಿಗೆನೆಲೆಯಾದ
ಕಾಂಡಿಲ್ಯಗೋತ್ರದಡಾಕ

[41]ರಸದಂಡನಾಯಕನಪಜವೆದಣ್ಣಾಯಕಿತಿಯುಮಕ್ಕಳುನಾಕಣದಂಡನಾಯಕನುಂಮಱಿಯಾನೆದಂಡನಾಯಕನುಂಅವರವು
ಕ್ಕಳುಮಾಜಣದಂಡನಾಯಕನ್

[42]ಆತನಸತಿಹಂಮವೆದಂಣ್ಣಾಯಕಿತಿಯುಂಡಾಕರಸದಂಡನಾಯಕಆತನಸತಿದುಗ್ಗವೆದಂಣ್ಣಾಯಕಿತಿಆವರಮಕ್ಕಳುಮಱಿಯಾನೆ
ದಂಡನಾಯಕನ್

[43]ಭರತಿನ್ಮೆಯದಂಡನಾಯಕನುಂಅವರತಂಗೆ ॥ ಜಿನಪದಪದ್ಮಭಕ್ತ್ಯಸುಚರಿತ್ರನಿಯುಕ್ತೆವಿನೀತೆಮಾಚಿರಾಜನಸುತಕಾವರಾಜನ
ಮನಃಪ್ರಿಯೆಚಾಕ

[44]ಲೆಸದ್ವಭೂಜನಾನನವಿಳಸಲ್ಲಲಾಮೆವಮಱಿಯಾನೆಯಸದ್ಭರತೇಶದಂಡನಾಥನಕಿಱಿದಂಗೆಮನ್ಮಥನವಿಕ್ರಮಲಕ್ಷ್ಮಿಯೊಲಾದವೊ
ಪ್ಪುವಳು ॥ ಶ್ರೀನ-ತ್ತಂ

[45]ಚಿಗೊಂಡವಿಕ್ರಮಗಂಗವಿಷ್ಣುವರ್ದ್ಧನದೇವನನ್ವಯದವಮಱಿಯಾನೆದಂಡನಾಯಕನುಂಭರತಣದಂಡನಾಯಕನುಂಸಬ್ಬಾಧಿ
ಕಾರಿಗಳುಂಮಾಣಿಕಭಂಡಾರಿ

[46]ಗಳುಂಪ್ರಾಣಾಧಿಕಾರಿಗಳುವಾಗಿಸುಖದಿಂಸಲುತ್ತಮಿರೆ ॥ ವಿಷ್ಣುವರ್ದ್ಧನದೇವಂಶ್ರೀಮದ್ರಾಜಧಾನಿದೋರಸಮುದ್ರದನೆಲೆವೀಡಿ
ನೊಳುಪೃಥ್ವೀರಾಜ್ಯಂಗೆಯ್ಯುತ್ತಮಿ

[47]ರೆಉತ್ತರಾಯಣಸಂಕ್ರಮಾಣದೊಳ . .ದನದೊಳುತಂಮುಗನಂಬಿಟ್ಟದೇವನಹೆಸರನಿಟ್ಟು ೧೦೦ ಹೊಂನಂಪಾದಪೂಜೆಯಿಂ
ಕೊಟ್ಟುಆಸಂ

[48]ದಿನಾಡಸಿನ್ದಗೆಜಿಯೆಯುಮಂಬಾಯ್ವೆಣ್ಣೆಗೆಬಗ್ಗವಳ್ಳಿಯುಮಂಕಲಿಕಣಿನಾಡದಿಂಡಿಗನಕೆಜಿಯೆಯಪ್ರಭುತ್ವಮುಮಂಬಿಟ್ಟದೇವನನ್ವ
ಹಸ್ತದಿಂಧಾರಾಪೂ

[49]ರ್ವಕಂಪಡದುಸುಖದಿನಿರೆ ॥ ಜನಿಯಿಸಿದಂವಿಷ್ಣುಮಹೀಶನವಧುಲಕ್ಷ್ಮಾದೇವಿಗನುಪಮನಾರಸಿಂಘವನಿಪಂನುತರಿಪುಭೂಪಾಳ
ರಾಯಲ

[50]ಲಾಟ(ತಟ)ಘಟ್ಟತಚರಣಂ ॥ ಶ್ರೀಮನ್ಮಹಾಮಂಡಳೇಶ್ವತನಾರಸಿಂಘದೇವರುರಾಜ್ಯಂಗೆಯುತ್ತಮಿರೆತತ್ಪಾದಪದ್ಮೋಪಜೀ
ವಿಗಳುಮಹಾಪ್ರಧಾನಮಱಿ

[51]ಯಾನೆದಂಡನಾಯಕರುಂಭರತಿನ್ಮೆಯದಂಡನಾಯಕರುಂತಂಮನ್ವಯದಸಿಂದಗೆಜಿಯೆಯಬಗ್ಗವಳ್ಳಿಯದಡಿಗನಕೆಜಿಯೆಯಪ್ರಭು
ತ್ವಕೆ ೫೦೦ ಹೊಂ

[52]ನಂಪಾದಪೂಜೆಯಿಂಕೊಟ್ಟುನಾರಸಿಂಘದೇವರಕೈಯಲುಪುನರ್ದ್ದತ್ತಿಯಾಗಿಪಡದುಸುಖದಿನಿರೆಕಾಲನಿಜಪ್ರತಾಪಿನರಸಿಂಘವುಹೀ

[53]ಪತಿಗಂಮದೇಭಲೀಲಾಲಸಯಾನೆಕಂಬುನಿಭಕಂಧರೆಪೆಚಲದೇವಿಗೆಜಯಶ್ರೀಲಲನೇಕನೀತನೆನೆಪ್ರಬ್ಬಿದನೂರ್ಜ್ಜಿತಪುಣ್ಯಮೂರ್ತ್ತಿ
ಬಲ್ಲಾಳನಸ್ತಿ

54ಳಕಂಸಮದವೈರಿಮಹೀಭುಜದರ್ಪ್ಪಭಂಜನಂ ॥ ಕಲಿಕಾಲಕ್ಷತ್ತ್ರಪುತ್ತ್ರಪ್ಪ್ರಬಳತರದುರಾಚಾರಸಂದೋಹದಿಂದ್ದಂಪೊಲೆಪೊರ್ದ್ದ
ಲುಪೇಸಿಪೇಸತ್ತಳವಳಿದ

55ಮಹೀಕಾನ್ತೆಯಂರಕ್ಷಿಸಲುಕಾಜಲಜಾಕ್ಷಂತಾನೆಬಂದಿಂತವತರಿಸಿದವೊಲಾವೀರಬಲ್ಲಾಳದೇವಂಕುಲಜಾತ್ಯಾಚಾರಸಾರಂನೃಪವರ
ನುದ

56ಯಂಗೆಯ್ದನಾಶ್ಚರ್ಯ್ಯಸಾರ್ಯ್ಯಂ ॥ ಶ್ರೀಮನ್ಮಹಾಮಂಡಳೇಶ್ವರನಸಹಾಯಸೂರನಿಸ್ಸಂಕಪ್ರತಾಪಹೊಯ್ಸಳವೀರಬಲ್ಲಾಳದೇ
ವರತತ್ಪಾದಪದ್ಮೋಪ

57ಜೀವಿಗಳಪ್ಪಶ್ರೀಮನ್ಮಹಾಪ್ರಧಾನಂಭರತಿಮ್ಮಯ್ಯದಣ್ಡನಾಯಕರುಂಶ್ರೀಮನ್ಮಹಾಪ್ರಧಾನಬಾಹುಬಲಿದಂಡನಾಯಕರುಂಸ
ರ್ವ್ವಾಧಿಕಾ

58ರಿಗಳುಂಮಾಣಿಕಭಂಡಾರಿಗಳುಂಪ್ರಾಣಾಧಿಕಾರಿಗಳುಮಾಗಿಸುಖದಿಂಸಲುತ್ತಮಿರೆ ॥ ಭರತಚಮೂಪತಿಗಮುಚಿತಾನ್ವಯಚಾರು
ಚರಿತ್ರದೊಪ್ಪು

59ವಾಹರಿಯಲೆದಂಡನಾಯಕಿತಿಗಂಗುಣರತ್ನಪಯೋಧಿಪುಟ್ಟಿದಂಪರಿಚಿತನೀತಿಶಾಸ್ತ್ರನಿಖಿಳಾಸ್ತ್ರವಿಶಾರದನಿಷ್ಟವಿಶಿಷ್ಟಭಾಸುರನಿಧಿ
ಬಿಟ್ಟದೇವನಖಿಳಾವನಿ

60ಮಂಡನಮೌಳಿಮಂಡನಂ ॥ ಸೇನಾಪತಿಮಱಿಯಾನೆಗೆಭಾನುಗೆಕಾನೀನನಾದವೋಲ್ಸುತನಾದಂಭಾನುಸಮುದ್ಯುತಿವಿಬುಧನಿಧಾನಂ
ಗುಣರತ್ನರಾಸಿಯ

61ಪ್ಪಂಬೊಪ್ಪಂ ॥ ಮಱಿಯಾನೆದಂಡನಾಥಂಗಱಿವಿನಕಣಿಯೆನಿಸಿಪುಟ್ಟಿದಂಜನವಿನುತಂಕಱಮಱಿಯಿಲ್ಲದಜಸದಿನೆಱೆದಂಜಿತವೀ
ರವೈರಿಹೆಗ್ಗಡೆದೇವಂ ॥ ಭರತ

62ಚಮೂಪನಪುತ್ತ್ರಂಪುರುಶಾರ್ತ್ಥಾಂದೋಧಿಮಾನಕನಕನಗೇಂದ್ರಂಪುರುಷೋತ್ತಖೇಚರಮನುಮುನಿಚರಿತಂಮಱಿಯಾನೆದೇ
ವನದಟರಗೋವಂ ॥ ಅನುಪಮದಂಡ

63ನಾಥಭರತಾತ್ಮಜೆಭೂನುತಜಿನನೇಚಿ ರಾಜನಂಗನೆವಿಭುರಾಯದೇವಮಱಿಯಾನೆಗಳಂಬಿಕೆಸಿಂದಘಟ್ಟದೊಳುಘನತರಕೂಟ
ಕೋಟಿಯುತಪಾರ್ಶ್ವಜಿನೇಶ್ವರಗೇಹ

64ಮಂಜಗಜ್ಜನನುತಮಾಗೆಮಾಡಿಸಿದಶಾನ್ತಲದೇವಿಕ್ರಿತಾರ್ತ್ಥಿಧಾತ್ರಿಯೊಳು ॥ ಜಿನಜನನಿಗೆಣೆಯೆಬಂಮವೆಜನನಿಗಡತಂದೆನೆಗಳ್ದ
ಹೆಗ್ಗಡೆಪಾರ್ಶ್ವಂಗನುನಯ

65ದೆಪುತ್ರನಾದಂದಿನಪತಿಗೆ . . . . ನಿಪತೇಜದಾತಂಶಾನ್ತಂ ॥ ಅವನತಂಗೆಯರುದೇಮಲದೇವಿದುಗ್ಗಿಲದೇವಿಯರು ॥ ಭರತಚಮೂ
ಪನಿಂಪಿರಿಯನಾಮ

66ಱಿಯಾನೆಚಮೂಪನಾಮೂವರ . . ಗಂಮಹಾಪ್ರಭುಮಹಾಗುಣಿವೀರ್ಯ್ಯದಧೈರ್ಯ್ಯದಾಗರಂಭರತಚಮೂಪನಂಗಭವರೂ
ಪನಪಾ

67ಸ್ತರವಿಪ್ರತಾಪನುದ್ಧರಳವಿವಿಕ್ರಮಕ್ರಮವಿನಿರ್ಜ್ಜಿತಶತ್ರುಪರಾಕ್ರಮಾಕ್ರಮಂ ॥ ಅನ್ತೆನಿಪಭರತಸೇನಾಕಾನ್ತನಕಡುಹೊಂನ
ಕಾನ್ತೆಬೂಚೆಲೆಭೂ

68ಚಕ್ರಾಂತಸ್ಫಾಟಿತಶಶಿಮಣಿಕಾನ್ತಿಲಸತ್ಕೀರ್ತ್ತಿಮೂರ್ತ್ತಿಸತಿರತಿಯೆಂನಳು । ಭರತಚಮೂಪನತಂಮಂಸ್ಥಿರಗುಣನಭಿಮತನೆನೆ
ಬಾಹುಬಲಿದಂಡೇಶಂಪು

69ರುಶಾರ್ತ್ಥಶಾರ್ತ್ಥತೀರ್ಥ್ಥಂಪರಹಿತವಿದ್ಯಾಧರೇಂದ್ರನಿಂದ್ರೇಜ್ಯನಿಭಂ ॥ ಆವಿಭುವಿನಸತಿನಾಗಲದೇವಿಜಗತುಖ್ಯಾತೆಸೀತೆಪತಿಹಿತ
ದಿಂದಂಭಾವಭವಾಂಗನೆರೂ

70ಪಿಂಭಾವಿಸೆತಾಂಪೇಣ್ಮೆಯಿಂದಲಕ್ಷ್ಮಿಯೆನಿಪ್ಪಳು ॥ ಒಡವದರೂಪಿನಿಂದೆನಯದಿಂದೆಶೆನೋಡುವಕಣ್ಣಬೇಡುವವುತಾಂಪಡೆದನು
ರಾಗದಿಂದಚಮೂಪ

